ಎಪ್ರಿಲ್ 2023 ಸಂಪುಟ 19
ಸಂಚಿಕೆ 04
ಸಂಚಿಕೆ ಬೆಲೆ ರೂ. 1/-

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನ

ಮಾಸ ಪತ್ರಿಕೆ






ಮಹಿಳಾ ವಿಭಾಗ – ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ – ‘ಸ್ತ್ರೀ ಪರ್ವ’





ವಿವಾಹ ವೇದಿಕೆ – ಕಂಕಣ ಭಾಗ್ಯ ಯೋಜನೆಯಡಿಯಲ್ಲಿ ಉಚಿತ ವಿವಾಹ



ಸರ್ವ ಸದಸ್ಯರಿಗೆ
ಬಿಸು(ಯುಗಾದಿ)
ಹಬ್ಬದ ಶುಭಾಶಯಗಳು


324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

# SPOWIN INTERNATIONAL














* CRICKET
* BADMINTON
* TENNIS
* SQUASH
* SOCCER
* BASKET BALL
* VOLLEY BALL
* THROW BALL
* APPARELS
* INDOOR GAMES
* FITNESS ACCESSORIES
* SPORTS ACCESSORIES
* CAROM BOARD
* TABLE TENNIS
* SKATING
* SWIMMING
* TROPHIES
* MEDALS & MOMENTOS

## ALL DAYS OPEN FROM 10 AM TO 9 PM

**SPOWIN** PLAY WITH CONFIDENCE

## ALL YOUR SPORTS & FITNESS NEEDS UNDER ONE ROOF

No. 5 Shree Arcade, 12th Cross, Ideal Home Township, Rajarajeshwari Nagar, Bangalore – 560098
Landmark Opp. to Watering Hole Restaurant. Contact 080-41148942 9663148064

YONEX, SG, CEAT, Wilson, NIVIA, LI-NING, SS, SF STANFORD, DUNLOP, COSCO, SPARTAN, MRF, adidas, VECTOR X, SPALDING, Babolat, DSC, GM, speedo, LYCOT, asics, STAG, bonjour, GKI, HEAD

Racket Stringing done in 1 hr

We accept all major credit and debit cards

Free Home Delivery
(*Terms & Conditions Apply)

We also undertake orders of Treadmills, all types of Fitness Equipments, and also supply of all types of Basket Ball Poles, Tennis Poles, Badminton Poles, Kabaddi Court, Badminton Court and Basket Ball Court, Multygyms for Schools, Colleges, Apartments & Software Companies.

**For more information Contact : SUREKHA. R. SHETTY : 9538113889**

You can also mail us @ spowininternational2021@gmail.com

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL 19** **APRIL 2023** **ISSUE 04**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಹ ಸಂಪಾದಕರು :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – **ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಮಹಿಳಾ ವಿಭಾಗ – ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ | 5–6 |
| ವಿವಾಹ ವೇದಿಕೆ – ಕಂಕಣ ಭಾಗ್ಯ | 7–8 |
| ಶ್ರೀಮತಿ ರೇವತಿ ಶೆಟ್ಟಿ ಕೋಟ ಅವರ ಕೃತಿಗಳ ಲೋಕಾರ್ಪಣೆ ಸಮಾರಂಭ | 9–10 |
| ಸದಸ್ಯತ್ವ ಸಮಿತಿ – 2022–24 | 11 |
| I Had No Choice | 12–13 |
| ರಾಜಕೀಯ ನಾಯಕರಿಗೆ ವಿಶೇಷ ಆದ್ಯತೆ–ಸ್ವೀಡನ್ ಮಾದರಿ | 14–15 |
| ಬಹುಮುಖೀ ವ್ಯಕ್ತಿತ್ವದ ಡಾ. ಬಿ. ಕೃಷ್ಣಾನಂದ ಹೆಗ್ಡೆ | 16–17 |
| ಹೃಷಿ ಕೇಶ ಇಲ್ಲಿಗೆ ಋಷಿಕೇಶವೆಂತಲೂ ಕರೆಯುತ್ತಾರೆ | 18–19 |
| ಮೌನವೇ ಶಿಕ್ಷೆ, ಮಾತೇ ಬಿಡುಗಡೆ | 20 |
| ಬಂಟ್ಸ್ ಸೇವಾದಳ – ವಿದ್ಯಾಸಿರಿ ಯೋಜನೆ | 21 |
| 'ವಿದ್ಯಾಸಿರಿ' ಯೋಜನೆಯಡಿಯಲ್ಲಿ ನೋಟ್ ಪುಸ್ತಕ ಹಾಗೂ ಕಲಿಕಾ ಸಾಮಗ್ರಿಗಳು | 22–23 |
| ಯಕ್ಷ ಬಂಡಿಗೆ ಬಂಟರ ಕೊಂಡಿ | 24–25 |

**ಮುಖ ಪುಟ**

ಅಂತರರಾಷ್ಟೀಯ ಮಹಿಳಾ ದಿನಾಚರಣೆ – "ಸ್ತ್ರೀ ಪರ್ವ"
ವಿವಾಹ ವೇದಿಕೆ – ಕಂಕಣ ಭಾಗ್ಯ ಯೋಜನೆಯಡಿಯಲ್ಲಿ ಉಚಿತ ವಿವಾಹ

# ಸಂಪಾದಕೀಯ



ಯುಗಾದಿ ಹಬ್ಬವು ಮನಮನಗಳಿಗೆ ಸಂತಸ ತರುವ ಶುಭದಿನ. ಒಬ್ಬರು ಇನ್ನೊಬ್ಬರಿಗೆ ಶುಭಕೋರುವ ಸುದಿನ. ಅದು ವೈಭವದ ಪ್ರದರ್ಶನವಲ್ಲ, ಸಂಸ್ಕೃತಿ ಸಂಸ್ಕಾರದ ನಿದರ್ಶನ. ಐಕ್ಯತೆಯ ಸಂಪೂರ್ಣ ಅನಾವರಣ, ಸಂತಸ ಸಂಭ್ರಮದೊಂದಿಗೆ ಅರಿತು ಬೆರೆತು ಕಲೆತು ಬದುಕುವ ಸಂಸ್ಕಾರದ ಅಡಿಪಾಯ. ನಮ್ಮ ಹಿರಿಯರಿಗೆ ಮನ್ನಣೆ ನೀಡುತ್ತಾ ಬದುಕಿನ ಸತ್ಯಪಥವ ತೋರಿಸುವುದೇ ಹಬ್ಬದ ರಹದಾರಿ.

ಯುಗಾದಿ ಅಂದರೆ ಯುಗದ ಆದಿ. ಭಾರತೀಯ ಹಿಂದುಗಳು ತುಂಬಾ ವಿಜೃಂಭಣೆಯಿಂದ ಆಚರಿಸುವ ಹಬ್ಬ. ಸೃಷ್ಟಿಕರ್ತ ಯುಗಾದಿಯ ದಿನದಂದು ಸೃಷ್ಟಿ ಕಾರ್ಯವನ್ನು ಪ್ರಾರಂಭಿಸಿದನು. ಮತ್ತು ಹಿಂದೂಗಳ ನಂಬಿಕೆಯ ಪ್ರಕಾರ, ಭಗವಾನ್ ಬ್ರಹ್ಮ ದೇವರು ಇಡೀ ವಿಶ್ವವನ್ನು ಸೃಷ್ಟಿಸಿದನು ಮತ್ತು ಭೂಮಿಯ ಮೇಲಿನ ನಮ್ಮ ಒಂದು ವರ್ಷವು ಬ್ರಹ್ಮ ದೇವರಿಗೆ ಒಂದು ದಿನಕ್ಕೆ ಸಮಾನವಾಗಿರುತ್ತದೆ. ಆದ್ದರಿಂದ, ನಾವು ಯುಗಾದಿಯ ಹೊಸ ವರ್ಷವನ್ನು ಪ್ರಾರಂಭಿಸಿದಾಗ ಬ್ರಹ್ಮ ದೇವನು ಹೊಸ ದಿನವನ್ನು ಪ್ರಾರಂಭಿಸುತ್ತಾನೆ ಎಂದು ಹೇಳಲಾಗುತ್ತದೆ. ಆದ್ದರಿಂದ, ಯುಗಾದಿಯನ್ನು ಭೂಮಿಯು ಮತ್ತು ಅದರ ಮೇಲಿನ ಜೀವ ರೂಪಗಳು ಹೊರಹೊಮ್ಮಲು ಪ್ರಾರಂಭಿಸಿದ ಸೃಷ್ಟಿಯ ಪ್ರಾರಂಭದ ನೆನಪಿಗಾಗಿ ಆಚರಿಸಲಾಗುತ್ತದೆ ಎಂದು ನಂಬಿಕೆ.

ಯುಗಾದಿ ಹಬ್ಬದ ಹಿಂದೆ ಪೌರಾಣಿಕ ಕಥೆಯೂ ಇದೆ. ಒಮ್ಮೆ ಸಂಭಬಕಾಸುರನೆಂಬ ರಾಕ್ಷಸನಿದ್ದ. ಒಂದು ದಿನ ಈ ರಾಕ್ಷಸನು ಬ್ರಹ್ಮದೇವನ ವೇದಗಳನ್ನು ಕದ್ದು ಸಮುದ್ರದಲ್ಲಿ ಅಡಗಿಕೊಂಡನು. ದೈತ್ಯನೊಬ್ಬ ಬ್ರಹ್ಮನ ವೇದಗಳನ್ನು ಕದ್ದಿದ್ದಾನೆ ಎಂದು ವಿಷ್ಣುವಿಗೆ ತಿಳಿದಾಗ. ವಿಷ್ಣುವು ಮತ್ಸ್ಯ ರೂಪವನ್ನು ತಳೆದು ಸಮುದ್ರದ ಆಳಕ್ಕೆ ಹೋಗಿ ಆ ರಾಕ್ಷಸನೊಂದಿಗೆ ಹೋರಾಡಿದನು. ಮತ್ತು ಆ ರಾಕ್ಷಸನನ್ನು ತನ್ನ ಸುದರ್ಶನ ಚಕ್ರದಿಂದ ಸಂಹಾರ ಮಾಡಿದನು. ಮತ್ತು ವೇದಗಳನ್ನು ಮರಳಿ ತಂದು, ಅದನ್ನು ಬ್ರಹ್ಮ ದೇವನಿಗೆ ಹಿಂದಿರುಗಿಸಿದನು. ಈ ಸಂಪೂರ್ಣ ಘಟನೆಯು ಚೈತ್ರ ಮಾಸದ ಮೊದಲ ದಿನದಂದು ಸಂಭವಿಸಿತು ಎನ್ನುವ ನಂಬಿಕೆ ಹಿಂದೂ ಧರ್ಮೀಯರದ್ದು. ಬ್ರಹ್ಮ ದೇವನು ವೇದಗಳನ್ನು ಮರಳಿ ಪಡೆದು ವಿಶ್ವವನ್ನು ಸೃಷ್ಟಿಸಿದ ದಿನ. ಆದ್ದರಿಂದ, ನಾವು ಈ ದಿನ ಹೊಸ ವರ್ಷವನ್ನು ಆಚರಿಸುತ್ತೇವೆ.

ಆಂಧ್ರಪ್ರದೇಶ, ಕರ್ನಾಟಕದವರಿಗೆ ಹೊಸ ವರ್ಷದ ಆರಂಭ ಈ ಯುಗಾದಿ. ಮಹಾರಾಷ್ಟ್ರದಲ್ಲಿ ಈ ಹಬ್ಬವನ್ನು ಗುಡಿ ಪಾಡ್ವ ಎಂದು ಕರೆಯುತ್ತಾರೆ. ಇದು ಚಂದ್ರಮಾನ ಯುಗಾದಿಯಾದರೆ ಕೇರಳದಲ್ಲಿ ತಮಿಳುನಾಡಲ್ಲಿ ಮತ್ತು ದಕ್ಷಿಣ ಕನ್ನಡದಲ್ಲಿ ಸೌರಮಾನ ಯುಗಾದಿಯನ್ನು ಆಚರಿಸುತ್ತಾರೆ.

ಯುಗಾದಿಯಲ್ಲಿ ಬೆಲ್ಲ ಮತ್ತು ಬೇವು ಏನನ್ನು ಸೂಚಿಸುತ್ತವೆ ಎಂಬುದನ್ನು ನೋಡೋಣ. 6 ರುಚಿ – 6 ಭಾವನೆಗಳು ಬೇವು ಬೆಲ್ಲದಲ್ಲಿ ಬೆರೆಸುವ 6 ಪದಾರ್ಥಗಳು ವಿಭಿನ್ನ ರುಚಿಗಳನ್ನು ಹೊಂದಿವೆ. ಈ ಪ್ರತಿಯೊಂದು ರುಚಿ ನಮ್ಮ ಜೀವನದ ಏರಿಳಿತವನ್ನು ಸಂಕೇತಿಸುತ್ತವೆ. ಈ ಸಂದರ್ಭವು ನಮಗೆ ಹೊಸ ದಿನಗಳನ್ನು ತರಬಹುದು ಎಂದು ಇದು ಸೂಚಿಸುತ್ತದೆ. ಮಾನವ ಜೀವನವು ಎಲ್ಲಾ ರೀತಿಯ ಭಾವನೆಗಳಿಂದ ತುಂಬಿದೆ, ಅದು ನಮಗೆ ಜೀವನದಲ್ಲಿ ಸರಿಯಾದ ಮಾರ್ಗವನ್ನು ತೋರಿಸುತ್ತದೆ.

1. ದುಃಖವನ್ನು ಸೂಚಿಸುವ ಬೇವು: ಬೇವು ಬದುಕಿನ ಕಹಿಯನ್ನು ಸೂಚಿಸುತ್ತದೆ.ನಮ್ಮ ಜೀವನದ ಕಹಿಗಳನ್ನು ನಾವು ಒಪ್ಪಿಕೊಳ್ಳಬೇಕು.
2. ಸಿಹಿಯನ್ನು ಸೂಚಿಸುವ ಬೆಲ್ಲ ಖಂಡಿತವಾಗಿಯೂ ಯುಗಾದಿಯ ಬೇವು ಬೆಲ್ಲದಲ್ಲಿ ಪ್ರಮುಖ ಮಹತ್ವದ್ದಾಗಿದೆ. ಜೀವನದಲ್ಲಿ ಏನೇ ಬಂದರೂ, ನಗು ಮುಖದಿಂದ ಎಲ್ಲವನ್ನೂ ಒಪ್ಪಿಕೊಂಡರೆ, ಸಮಸ್ಯೆಗಳು ಕಠಿಣವೆನಿಸುವುದಿಲ್ಲ. ಇದನ್ನೇ ಸಿಹಿಕಹಿಯ ಮಿಶ್ರಣದಲ್ಲಿರುವ ಬೆಲ್ಲ ಸೂಚಿಸುತ್ತದೆ.
3. ಕೋಪವನ್ನು ಸೂಚಿಸುವ ಮೆಣಸು: ಎಲ್ಲರಿಗೂ ಕೋಪ ಬರುವುದು ಸಹಜ. ಕೆಲವರು ಅದನ್ನು ನಿಯಂತ್ರಣ ಮಾಡಿಕೊಳ್ಳುತ್ತಾರೆ ಅದರೆ ಇನ್ನು ಕೆಲವರು ಆ ಭಾವನೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ಈ ಯುಗಾದಿಗೆ ಕೋಪವನ್ನು ಮೆಣಸಿನ ಹಾಗೆ ನುಂಗಿ ಹೊಸ ಜೀವನವನ್ನು ಆರಂಭಿಸಬೇಕು.
4. ಭಯವನ್ನು ಸೂಚಿಸುವ ಉಪ್ಪು: ಯುಗಾದಿಯ ಬೇವು ಬೆಲ್ಲದ ಇತರೆ ಪದಾರ್ಥಗಳಾದ ಉಪ್ಪು ಭಯವನ್ನು ಸಂಕೇತಿಸುತ್ತದೆ. ಉಪ್ಪು ಎಲ್ಲದಕ್ಕೂ ರುಚಿ ನೀಡುವಂತೆ ತಪ್ಪುಗಳನ್ನು ಮಾಡದಂತೆ ತಡೆಯುವ ಈ ಭಯವಿದ್ದರೆ ಮಾತ್ರ ಕೆಲಸಸಾಧ್ಯ.
5. ಅಸಮಾಧಾನ ಸೂಚಿಸುವ ಹುಣಸೇಹಣ್ಣು: ಹುಣಸೆಹಣ್ಣಿನ ಹುಳಿ ರುಚಿ ಜೀವನದಲ್ಲಿನ ಅಸಮಾಧಾನವನ್ನು ಸಂಕೇತಿಸುತ್ತದೆ. ಅದನ್ನು ಹೇಗೆ ನಿಯಂತ್ರಿಸಬೇಕೆಂದು ನಮಗೆ ತಿಳಿದಿದ್ದರೆ, ಜೀವನದಲ್ಲಿನ ಗುರಿಗಳನ್ನು ಸುಲಭವಾಗಿ ಸಾಧಿಸಬಹುದು.
6. ಅಚ್ಚರಿಯನ್ನು ಸೂಚಿಸುವ ಮಾವು: ಇದು ಯುಗಾದಿ ಬೇವು ಬೆಲ್ಲದ ಕೊನೆಯ ಹಾಗು ಪ್ರಮುಖವಾದ ಪದಾರ್ಥ. ಜೀವನದಲ್ಲಿ ಅಚ್ಚರಿ ಮೂಡಿಸುವ ಸಂಗತಿಗಳು ಇಲ್ಲದಿದ್ದರೆ, ಬದುಕು ಬೇಸರ ಹುಟ್ಟಿಸುತ್ತದೆ. ಮಾವಿನ ಕಾಯಿಯ ಈ ಹುಳಿ ಅಚ್ಚರಿಗಳನ್ನು ತಂದೊಡ್ಡುವ ಮೂಲಕ ನಾವು ಜೀವನದಲ್ಲಿ ಹೊಸತನವನ್ನು ಕಲಿಯಲು ಪ್ರೇರಣೆ ನೀಡುತ್ತದೆ.

ಸಂಘದ ಸರ್ವ ಸದಸ್ಯರಿಗೆ ಯುಗಾದಿ (ಬಿಸು) ಹಬ್ಬದ ಶುಭಾಶಯಗಳು.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



ಸಂಘದ ಸರ್ವ ಸದಸ್ಯ ಬಾಂಧವರಿಗೆ ಯುಗಾದಿ (ಬಿಸು) ಹಬ್ಬದ ಶುಭಾಶಯಗಳು. ಎಪ್ರಿಲ್ 14ರಂದು ಸೌರಮಾನ ಯುಗಾದಿ ಆಚರಿಸುವುದು ನಮ್ಮ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಡಿಕೆ. ಹಾಗೆಯೇ ಪ್ರತೀ ವರ್ಷದಂತೆ ನಮ್ಮ ಸಂಘದಲ್ಲಿಯೂ ಎಪ್ರಿಲ್ 14ರಂದು ಬಿಸು ಆಚರಣೆ ನಡೆಯಲಿದೆ. ಬಿಸು ಆಚರಣೆಯ ವಿಧಿ ವಿಧಾನಗಳನ್ನು ನೋಡಲು ನಮಗೆ ಇನ್ನೊಂದು ಅವಕಾಶ. ಈ ಸಮಾರಂಭದಲ್ಲಿ ದಿ. ಕೆ.ಪಿ. ರಾಮಣ್ಣ ಶೆಟ್ಟಿ ಸ್ಮಾರಕ ಶೈಕ್ಷಣಿಕ ಕ್ಷೇತ್ರದ ಪ್ರಶಸ್ತಿಯನ್ನು ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳು ಹಾಗೂ ಶ್ರೀ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ। ಚಂದ್ರಶೇಖರ ಶೆಟ್ಟಿಯವರಿಗೂ, ದಿ. ಆರ್.ಎನ್. ಶೆಟ್ಟಿ ಸ್ಮಾರಕ ಉದ್ಯಮ ಕ್ಷೇತ್ರದ ಪ್ರಶಸ್ತಿಯನ್ನು ಮುಂಬಯಿಯ ಪ್ರಖ್ಯಾತ ಉದ್ಯಮಿ ಶ್ರೀ ತೋನ್ಸೆ ಆನಂದ ಶೆಟ್ಟಿಯವರಿಗೆ ಪ್ರಧಾನ ಮಾಡುವ ಸುವರ್ಣ ಅವಕಾಶ ನಮ್ಮದು. ಇದೇ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಮೆಡಿಕಲ್ ಕಾಲೇಜು ಮತ್ತು ರೀಸರ್ಚ್ ಇನ್ಸ್ಟಿಟ್ಯೂಟ್‌ನ ನಿರ್ದೇಶಕರು ಮತ್ತು ಡೀನ್ ಡಾ. ಮನೋಜ್ ಕುಮಾರ್ ಹೆಚ್.ವಿ, ಗೌರವ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಶ್ರೀ ಹರೇಕಳ ಹಾಜಬ್ಬರವರು ನಮ್ಮೊಂದಿಗೆ ಇರುವುದು ನಮ್ಮ ಸಂತಸವನ್ನು ಇಮ್ಮಡಿಗೊಳಿಸಿದೆ. ಇದರೊಂದಿಗೆ ಆಕರ್ಷಕ ಮನರಂಜನೆ ಕಾರ್ಯಕ್ರಮಗಳು ನಮ್ಮನ್ನು ರಂಜಿಸಲಿದೆ.

ಮಾರ್ಚ್ 11ನೇ ತಾರೀಕಿನಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸಂಘದ ಮಹಿಳಾ ವಿಭಾಗದಿಂದ ನಡೆದ ಸ್ತ್ರೀ ಪರ್ವ ಕಾರ್ಯಕ್ರಮ ಬಹಳ ವೈವಿಧ್ಯಮಯವಾಗಿ ಮೂಡಿ ಬಂತು. ಮುಖ್ಯ ಅತಿಥಿಗಳಾಗಿ ಮನಶಾಸ್ತ್ರಜ್ಞರಾದ ಡಾ. ಪದ್ಮಾಕ್ಷಿ ಲೋಕೇಶ್, ಖ್ಯಾತ ನಟಿ ಹಾಗೂ ಬರಹಗಾರ್ತಿ ಕುಮಾರಿ ರಂಜನಿ ರಾಘವನ್‌ರವರು ಭಾಗವಹಿಸಿದ್ದರು. ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿ, ಸಂಚಾಲಕಿ ಶ್ರೀಮತಿ ವಿಜಯಲಕ್ಷ್ಮಿ ಶೆಟ್ಟಿ ಕೊಡ್ಲಾಡಿ ಹಾಗೂ ಸಮಿತಿಯ ಎಲ್ಲಾ ಸದಸ್ಯರಿಗೂ ಅಭಿನಂದನೆಗಳು.

ಎಪ್ರಿಲ್ 2ನೇ ತಾರೀಕಿನಂದು ಸಂಘದ ವಿವಾಹ ವೇದಿಕೆ ಸಮಿತಿಯಿಂದ ಕಂಕಣ ಭಾಗ್ಯ-ಉಚಿತ ವಿವಾಹ ಯೋಜನೆಯಡಿಯಲ್ಲಿ ಜರುಗಿದ ವಿವಾಹ ಕಾರ್ಯಕ್ರಮ ಜನರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ರೇವಾ ಯೂನಿವರ್ಸಿಟಿಯ ಪ್ರೊ-ವೈಸ್‌ಚಾನ್ಸಲರ್ ಡಾ. ವಿದ್ಯಾ ಶಂಕರ್ ಶೆಟ್ಟಿಯವರು ಭಾಗವಹಿಸಿದರು. ಸುಮಾರು 10-12 ವರ್ಷಗಳಿಂದ ಉಚಿತ ಸಾಮೂಹಿಕ ವಿವಾಹದ ಬಗ್ಗೆ ಯೋಚನೆಗಳು ನಡೆದರೂ, ಬಂಟ ಸಮಾಜದಿಂದ ಸಾಮಾನ್ಯವಾಗಿ ಸಾಮೂಹಿಕ ವಿವಾಹಕ್ಕೆ ಮುಂದೆ ಬರುವವರು ವಿರಳ. ಏನೋ ಒಂದು ತರಹದ ಸಂಕೋಚ, ಸ್ವಾಭಿಮಾನದ ಕಾರಣಗಳಿರಬಹುದು. ಆದರೆ ಈ ವರ್ಷ ಸಮಿತಿಯ ಚೇರ್‌ಪರ್ಸನ್‌ರಾದ ಶ್ರೀಮತಿ ಶೋಭಾ ಶೇಕ, ಸಂಚಾಲಕರಾದ ಶ್ರೀ ಸುರೇಂದ್ರ ಶೆಟ್ಟಿ ಹಾಗೂ ಸಮಿತಿಯ ಎಲ್ಲಾ ಸದಸ್ಯರ ನಿರಂತರ ಶ್ರಮದಿಂದ ಕಡಿಮೆ ಪಕ್ಷ ಒಂದು ಜೋಡಿಯಾದರೂ ನಮಗೆ ಸಿಕ್ಕಿರುವುದರಿಂದ ಈ ಯೋಜನೆಗೆ ಚಾಲನೆ ದೊರೆತಂತಾಯಿತು. ಅನೇಕ ದಾನಿಗಳು ಮುಂದೆ ಬಂದು ಹೆಚ್ಚಿನ ಖರ್ಚು ವೆಚ್ಚಗಳನ್ನು ನೋಡಿಕೊಂಡರು. ಬಹಳ ವಿಜೃಂಭಣೆಯಿಂದ, ಸಂಪ್ರದಾಯದ ವಿಧಿವಿಧಾನಗಳಿಂದ ಮದುವೆ ನೆರವೇರಿತು. 600ಕ್ಕೂ ಹೆಚ್ಚಿನ ಸದಸ್ಯರು ಭಾಗವಹಿಸಿ, ವಧೂವರರಿಗೆ ಆಶೀರ್ವಾದ ಮಾಡಿ, ಸಹಭೋಜನವನ್ನು ಸ್ವೀಕರಿಸಿದರು. ಮುಂದಿನ ದಿನಗಳಲ್ಲಿ 4-6 ಅಥವಾ ಇನ್ನೂ ಹೆಚ್ಚಿನ ಜೋಡಿಗಳಿಗಾಗಿ ಶೋಧ ನಡೆಸಿ ಈ ಪುಣ್ಯದ ಕೆಲಸವನ್ನು ಮುಂದುವರಿಸುವುದು ನಮ್ಮ ಗುರಿಯಾಗಿದೆ.

ಈ ಶೈಕ್ಷಣಿಕ ವರ್ಷದಲ್ಲಿ ಕೆಲವರಿಗೆ ಈಗ ಪರೀಕ್ಷೆಗಳು ನಡೆಯುತ್ತಿದೆ, ಕೆಲವರದ್ದು ಮುಗಿದಿದೆ, ಕೆಲವರ ಫಲಿತಾಂಶವೂ ಬಂದಿದೆ. ಮುಂದಿನ ಶೈಕ್ಷಣಿಕ ವರ್ಷ ಮೇ ತಿಂಗಳ ಕೊನೆಯ ವಾರದಲ್ಲಿ ಪ್ರಾರಂಭವಾಗಲಿದೆ. ಸರ್ವರಿಗೂ ಭಗವಂತ ಒಳ್ಳೆಯದನ್ನು ಮಾಡಲಿ ಎಂದು ಹಾರೈಸುತ್ತೇನೆ.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು
hegdemm@gmail.com

# ಗೌರವ ಕಾರ್ಯದರ್ಶಿಗಳ ವರದಿ

## ಗೌರವ ಕಾರ್ಯದರ್ಶಿಗಳ ವರದಿ



ಸದಸ್ಯ ಬಾಂಧವರೆಲ್ಲರಿಗೂ ಸೌರಮಾನ ಯುಗಾದಿ (ಬಿಸು) ಹಬ್ಬದ ಹಾರ್ದಿಕ ಶುಭಾಶಯಗಳು. ಸಂಪ್ರದಾಯದಂತೆ ನಮ್ಮ ಸಂಘದಲ್ಲೂ ದಿನಾಂಕ 14.04.2023 ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಬಿಸು ಹಬ್ಬವನ್ನು ಆಚರಿಸಲಾಗುವುದು. ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳಾ ವಿಭಾಗದಿಂದ 'ಸ್ತ್ರೀ ಪರ್ವ' ಎನ್ನುವ ಹೆಸರಿನೊಂದಿಗೆ ಮಹಿಳಾ ದಿನಾಚರಣೆಯನ್ನು ದಿನಾಂಕ 11.03.2023 ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ಮಹಿಳಾ ಸಾಧಕಿಯರಿಗೆ ಗೌರವಾರ್ಪಣೆ, ಅಂತರ್-ಮಹಿಳಾ ಸಂಘಗಳ ಸಾಂಸ್ಕೃತಿಕ ಸ್ಪರ್ಧೆ, ಸೌಂದರ್ಯ ಲಹರಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಂಜಮ್ಮ ಜೋಗತಿ ಹಾಗೂ ಜೀವನ ಕೌಶಲ್ಯ ತರಬೇತುದಾರರಾದ ಪ್ರೊ. ಲತಿಕ್ ದಿನೇಶ್ ಶೆಟ್ಟಿ ಇವರಿಂದ ವಿಚಾರ ಸಂಕಿರಣ ಮೊದಲಾದ ಕಾರ್ಯಕ್ರಮಗಳು ಜರುಗಿದವು. ಸಂಜೆ ನಡೆದ ಸಭಾ ಕಾರ್ಯಕ್ರಮದಲ್ಲಿ ಮನಶಾಸ್ತ್ರಜ್ಞೆ ಶ್ರೀಮತಿ ಪದ್ಮಾಕ್ಷಿ ಲೋಕೇಶ್, ನಟಿ ರಂಜನಿ ರಾಘವನ್ ಭಾಗವಹಿಸಿದ್ದರು. ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಿದ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿ, ಸಂಚಾಲಕಿ ಶ್ರೀಮತಿ ವಿಜಯಲಕ್ಷ್ಮೀ ಎಸ್. ಶೆಟ್ಟಿ ಹಾಗೂ ಮಹಿಳಾ ವಿಭಾಗದ ಎಲ್ಲಾ ಸದಸ್ಯೆಯರಿಗೆ ವಂದನೆಗಳು.

ಸಮುದಾಯದ ಆರ್ಥಿಕವಾಗಿ ಅತ್ಯಂತ ಹಿಂದುಳಿದ ಕುಟುಂಬದ ಹೆಣ್ಣುಮಕ್ಕಳ ಮದುವೆಗೆ ನೆರವಾಗುವ ಉದ್ದೇಶದಿಂದ ಸಂಘದ ವಿವಾಹ ವೇದಿಕೆಯು ಉಚಿತ ವಿವಾಹ ಯೋಜನೆಯನ್ನು ಹಮ್ಮಿಕೊಂಡು ದಿನಾಂಕ 02.04.2023 ರಂದು ಒಂದು ಜೋಡಿಯ ವಿವಾಹವನ್ನು ಸಂಘದ ಸಭಾಭವನದಲ್ಲಿ ನೆರವೇರಿಸಲಾಯಿತು. ಹೆಚ್ಚಿನ ಮುತುವರ್ಜಿ ವಹಿಸಿ ಕಾರ್ಯಕ್ರಮ ಆಯೋಜಿಸಿದ ವಿವಾಹ ವೇದಿಕೆ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭ ಶೇಕ, ಸಂಚಾಲಕರಾದ ಶ್ರೀ ಎ. ಸುರೇಂದ್ರ ಶೆಟ್ಟಿ ಹಾಗೂ ವಿವಾಹ ವೇದಿಕೆ ಸಮಿತಿಯ ಎಲ್ಲಾ ಸದಸ್ಯರಿಗೆ ಅಭಿನಂದನೆಗಳು. ಸತತ ಪ್ರಯತ್ನದ ಹೊರತಾಗಿಯೂ ಹೆಚ್ಚು ಜೋಡಿಗಳು ಈ ಯೋಜನೆಯ ಸೌಲಭ್ಯ ಪಡೆಯಲು ಮುಂದೆ ಬರಲಿಲ್ಲ. ಮುಂದಿನ ವರ್ಷಗಳಲ್ಲಿ ಹೆಚ್ಚಿನ ಜೋಡಿಗಳು ಈ ಯೋಜನೆಯ ಪ್ರಯೋಜನ ಪಡೆಯಲಿ ಎನ್ನುವ ಆಶಯ ನಮ್ಮದಾಗಿದೆ. ವಿವಾಹ ವೇದಿಕೆ ವತಿಯಿಂದ ಪ್ರತೀ ಶನಿವಾರದಂದು ಮಧ್ಯಾಹ್ನ 3.00 ರಿಂದ 5.00 ಘಂಟೆಯವರೆಗೆ ಸಂಘದಲ್ಲಿ ನೋಂದಾಯಿಸಲ್ಪಟ್ಟ ವಧೂ-ವರರ ಮಾಹಿತಿ ಒದಗಿಸುವ ಸೌಲಭ್ಯವನ್ನು ಉಚಿತವಾಗಿ ನೀಡಲಾಗುತ್ತಿದ್ದು, ಆಸಕ್ತರು ಈ ಸೌಲಭ್ಯವನ್ನು ಉಚಿತವಾಗಿ ಪಡೆಯಬಹುದಾಗಿದೆ.

ಸಂಘದ ಬಂಟ್ಸ್ ಸೇವಾದಳದ 'ವಿದ್ಯಾ ಸಿರಿ' ಯೋಜನೆಯಡಿಯಲ್ಲಿ ಶಾಲಾ ನೋಟ್ ಪುಸ್ತಕ ಹಾಗೂ ಕಲಿಕಾ ಸಾಮಗ್ರಿ ಪಡೆಯಬಚ್ಚಿಸುವ ಬೆಂಗಳೂರಿನಲ್ಲಿ ವಾಸವಿರುವ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಈ ಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಹೆಚ್ಚಿನ ವಿವರಗಳನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ.

ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನದ ಹೈಸ್ಕೂಲ್ ವಿದ್ಯಾರ್ಥಿಗಳ ಪೋಷಕರ ಸಭೆ ಕರೆದು ಕುಂದು-ಕೊರತೆಗಳ ಬಗ್ಗೆ ಚರ್ಚಿಸಲಾಯಿತು. ಯಲಚಗುಪ್ಪೆ ಸಂಕೀರ್ಣದಲ್ಲೂ ಸಹ ಸಭೆಯನ್ನು ನಡೆಸಿ ಪೋಷಕರೊಂದಿಗೆ ಸಮಾಲೋಚಿಸಲಾಯಿತು. ವಿಜಯನಗರ ಹಾಗೂ ಯಲಚಗುಪ್ಪೆ ಸಂಕೀರ್ಣದಲ್ಲಿ ಪಿಯು ತರಗತಿಗಳಿಗೆ ಹಾಗೂ ಸಂಜೆ ಕಾಲೇಜಿನಲ್ಲಿ ಬಿ.ಕಾಂ. ಪದವಿಗೆ ದಾಖಲಾತಿ ಪ್ರಕ್ರಿಯೆ ಪ್ರಾರಂಭಗೊಳ್ಳಲಿದ್ದು, ಆಸಕ್ತ ಸಮುದಾಯ ಬಾಂಧವರು ಕಾಲೇಜಿನ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಇಂತಿ ತಮ್ಮ ಪ್ರೀತಿಯ,

**ಬಿ. ಆನಂದರಾಮ ಶೆಟ್ಟಿ**

**ಗೌರವ ಕಾರ್ಯದರ್ಶಿ**

# ಬಂಟರ ಸಂಘ ಬೆಂಗಳೂರು– ಮಹಿಳಾ ವಿಭಾಗ
# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ – ಸ್ತ್ರೀ ಪರ್ವ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಾರ್ಚ್ 11ರಂದು “ಸ್ತ್ರೀ ಪರ್ವ” ಎಂಬ ವಿಶೇಷ ಕಾರ್ಯಕ್ರಮವನ್ನು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಜ್ಯೋತಿ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀಮತಿ ಚಂದ್ರಮತಿ ಮತ್ತು ತಂಡದವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಆರಂಭಿಸಲಾಯಿತು.




ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿಯವರು ಅತಿಥಿಗಳು ಮತ್ತು ಸಂಘದ ಸದಸ್ಯರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಶ್ರೀಮತಿ ಶರ್ಮಿಳಾ ಎಂ. ಹೆಗ್ಡೆಯವರ ಶುಭ ಹಸ್ತದಿಂದ ಮಾರಾಟ ಮಳಿಗೆಗಳಿಗೆ ಚಾಲನೆ ನೀಡಿ ಶುಭ ಹಾರೈಸಲಾಯಿತು. ವಿವಿಧ ಅಂತರ್ ಮಹಿಳಾ ಸಂಘಗಳಿಂದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಇವುಗಳಲ್ಲಿ ಕಿರು ಪ್ರಹಸನ, ಹಾಸ್ಯ ಮತ್ತು ಸಮೂಹ ನೃತ್ಯಗಳು ಸಭಿಕರನ್ನು ರಂಜಿಸುವಲ್ಲಿ ಯಶಸ್ವಿಯಾದವು.

ನಂತರ ಪದ್ಮಶ್ರೀ ಪುರಸ್ಕೃತರಾದ ಡಾ। ಮಂಜಮ್ಮ ಜೋಗತಿಯವರೊಡನೆ ಖ್ಯಾತ ನಿರೂಪಕಿ ಶ್ರೀಮತಿ ರೇವತಿ ಶೆಟ್ಟಿಯವರು ವಿಚಾರ ಸಂಕಿರಣವನ್ನು ನಡೆಸಿಕೊಟ್ಟರು. ತೃತೀಯ ಲಿಂಗಿಯವರಾದ ಡಾ। ಮಂಜಮ್ಮ ಜೋಗತಿಯವರು ಜೀವನದಲ್ಲಿ ಅನುಭವಿಸಿದ ಕಹಿ ಅನುಭವಗಳನ್ನು ನಮ್ಮೊಡನೆ ಹಂಚಿಕೊಂಡರು. ಜೀವನದಲ್ಲಿ ಮಹಿಳೆಗೆ ತಾಳ್ಮೆ ಮುಖ್ಯ, ಕಷ್ಟ ಬಂದಾಗ ತಪ್ಪು ನಿರ್ಧಾರಗಳನ್ನು ಕೈಗೊಳ್ಳಬಾರದೆಂದು ಸಲಹೆ ನೀಡಿದರು.



ಕುಟುಂಬದ ಮೌಲ್ಯವನ್ನು ಉಳಿಸುವಲ್ಲಿ ಮಹಿಳೆಯ ಪಾತ್ರ ಎನ್ನುವ ವಿಷಯದ ಬಗ್ಗೆ ಪ್ರೊ. ಲತಿಕ್ ದಿನೇಶ್ ಶೆಟ್ಟಿಯವರು ವಿಚಾರ ಸಂಕಿರಣವನ್ನು ನಡೆಸಿಕೊಟ್ಟರು.

ರಂಗಭೂಮಿ ಕಲಾವಿದೆ ಶ್ರೀಮತಿ ಲೀಲಾ ಬಸವರಾಜ್‌ರವರು "ಅವ್ವರಸಿ" ಎಂಬ ಕಥಾ ಭಾಗವನ್ನು ತನ್ನ ಏಕವ್ಯಕ್ತಿ ಪ್ರದರ್ಶನದಿಂದ ಕಣ್ಣಿಗೆ ಕಟ್ಟುವಂತೆ ಪ್ರದರ್ಶಿಸಿದರು. ಶ್ರೀಮತಿ ಜ್ಯೋತಿ ಶೆಟ್ಟಿಯವರು ಕಾರ್ಯಕ್ರಮವನ್ನು ನಿರೂಪಿಸಿದರು.

ಸಂಜೆಯ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮನೋರೋಗ ತಜ್ಞೆ ಡಾ। ಪದ್ಮಾಕ್ಷಿ ಲೋಕೇಶ್ ಮತ್ತು ಖ್ಯಾತ ನಟಿ ಕುಮಾರಿ ರಂಜನಿ ರಾಘವನ್‌ರವರು ಭಾಗವಹಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಗೀತಾಂಜಲಿ ಡಿ. ಅಜಿಲ, ಗೌರವ ಕಾರ್ಯದರ್ಶಿ ಶ್ರೀ ಆನಂದರಾಮ ಶೆಟ್ಟಿ ಬಿ., ಖಜಾಂಚಿ ಶ್ರೀ ಅಮರನಾಥ ಶೆಟ್ಟಿ, ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿ, ಸಂಚಾಲಕಿ ಶ್ರೀಮತಿ ವಿಜಯಲಕ್ಷ್ಮಿ ಶೆಟ್ಟಿ ಉಪಸ್ಥಿತರಿದ್ದರು. ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿ ಮತ್ತು ತಂಡದವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಕಾರ್ಯಕ್ರಮದಲ್ಲಿ ಕ್ರೀಡಾ ಕ್ಷೇತ್ರದಲ್ಲಿನ ಸಾಧನೆಗಾಗಿ ನಮ್ಮ ಸಂಘದ ಹಿರಿಯ ಸದಸ್ಯರಾದ ಶ್ರೀಮತಿ ಮುಕ್ತಾ ಯು. ಶೆಟ್ಟಿ ಮತ್ತು ಯೋಗ ಸಾಧಕಿ ಶ್ರೀಮತಿ ಅಖಿಲಾ ಅಮಿತ್ ಶೆಟ್ಟಿ ಇವರನ್ನು ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.



ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ ಹಾಗೂ ದೇಣಿಗೆ ನೀಡಿದವರಿಗೆ ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು. ನಂತರ ಸಂಘದ ಸದಸ್ಯೆಯರು ಮತ್ತು ಕಿರುತೆರೆ ಕಲಾವಿದರಿಂದ ಆಯೋಜಿಸಲ್ಪಟ್ಟ ಸೌಂದರ್ಯ ಲಹರಿ ಕಾರ್ಯಕ್ರಮವು ಸಭಿಕರ ಕಣ್ಮನ ಸೆಳೆಯುವಂತೆ ಮೂಡಿ ಬಂತು. ಕಾರ್ಯಕ್ರಮವನ್ನು ನಂದಿನಿ ಮತ್ತು ಶಮೀರ ಬೆಳುವಾಯಿರವರು ನಿರೂಪಿಸಿದರು. ಸಹಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

**ಮಾಲತಿ ಜೆ. ಶೆಟ್ಟಿ**
**ಚೇರ್‌ಪರ್ಸನ್, ಮಹಿಳಾ ವಿಭಾಗ**

# ಬಂಟರ ಸಂಘ ಬೆಂಗಳೂರು
# ವಿವಾಹ ವೇದಿಕೆ – ಕಂಕಣ ಭಾಗ್ಯ



ಬಂಟರ ಸಂಘ ವಿವಾಹ ವೇದಿಕೆ ವತಿಯಿಂದ ನಡೆದ ಉಚಿತ ಕಂಕಣ ಭಾಗ್ಯದ ಮದುವೆಯ ಸಂಭ್ರಮವನ್ನು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಕಿಕ್ಕಿರಿದು ಸೇರಿದಂತಹ ಸಭಿಕರ ಸಮಕ್ಷಮದಲ್ಲಿ ಅದ್ದೂರಿಯಾಗಿ ನೆರವೇರಿಸಲಾಯಿತು. ವಧುವಿನ ಕಡೆಯವರು ಹಾಗೂ ವರನ ಕಡೆಯವರು ಕಂಕಣ ಭಾಗ್ಯದ ಈ ಮದುವೆಗೆ ವಿವಾಹ ವೇದಿಕೆ ಮತ್ತು ಬಂಟರ ಸಂಘವನ್ನು ಆನಂದ ಭಾಷ್ಪದೊಂದಿಗೆ ಅಭಿನಂದಿಸಿದರು. ವಿವಾಹ ವೇದಿಕೆಯ ಚೇರ್‌ಪರ್ಸನ್ ಶ್ರೀಮತಿ ಶೋಭ ಶೇಕರವರು ಸ್ವಾಗತ ಭಾಷಣದಲ್ಲಿ ಕಂಕಣ ಭಾಗ್ಯವು ಮುಂದೆಯೂ ಇನ್ನೂ ಹೆಚ್ಚಿನ ಜೋಡಿಗಳನ್ನು ಒಂದುಗೂಡಿಸುವ ಪ್ರಯತ್ನವನ್ನು ಮಾಡುತ್ತೇವೆ ಎಂದು ತಿಳಿಸಿದರು ಹಾಗೂ ಕಾರ್ಯಕ್ರಮಕ್ಕೆ ಸಹಾಯ ಹಸ್ತ ನೀಡಿದ ದಾನಿಗಳನ್ನು ನೆನಪಿಸಿಕೊಂಡರು. ಸಂಘದ ಕಾರ್ಯದರ್ಶಿಯವರಾದ ಶ್ರೀ ಬಿ. ಆನಂದರಾಮ ಶೆಟ್ಟಿಯವರು ಮಾತನಾಡಿ ಉಚಿತ ಕಂಕಣ ಭಾಗ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಆಡಳಿತ ಮಂಡಳಿಯಿಂದ ಸಂಪೂರ್ಣ ಸಹಾಯವನ್ನು ಮಾಡುವ ಭರವಸೆಯನ್ನು ನೀಡಿದರು.



ಮುಖ್ಯ ಅತಿಥಿಯಾದಂತಹ ಬೆಂಗಳೂರು ರೇವಾ ಯೂನಿವರ್ಸಿಟಿಯ ಪ್ರೋ–ವೈಸ್ ಚಾನ್ಸಲರ್ ಡಾ. ವಿದ್ಯಾ ಶಂಕರ್ ಶೆಟ್ಟಿಯವರು ಮಾತನಾಡಿ ಬಂಟರ ಸಂಘ ಹಲವಾರು ಜನಪರ ಕಾರ್ಯಕ್ರಮಗಳ ಮೂಲಕ ಆರ್ಥಿಕವಾಗಿ ಹಿಂದುಳಿದ ಬಂಟ ಸಮಾಜಕ್ಕೆ ನೆರವನ್ನು ನೀಡುವುದರ ಜೊತೆಗೆ ಕಂಕಣ ಭಾಗ್ಯವನ್ನು ನೀಡಿದ ವಿವಾಹ ವೇದಿಕೆಯ ಚೇರ್‌ಪರ್ಸನ್ ಶ್ರೀಮತಿ ಶೋಭ ಶೇಕ ಮತ್ತು ಅವರ ತಂಡದವರಿಗೆ ಅಭಿನಂದನೆಯನ್ನು ಸಲ್ಲಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಮಾತನಾಡಿ ಜನಪರ ಕಾರ್ಯದಿಂದ ಮೆಚ್ಚುಗೆ ಗಳಿಸಿದ ಬಂಟರ ಸಂಘ ಬೆಂಗಳೂರು ಕಂಕಣ ಭಾಗ್ಯದ ಮೂಲಕ ಸದಸ್ಯರಿಗೆ ಇನ್ನೊಂದು ಸಂದೇಶವನ್ನು ವಿವಾಹ ವೇದಿಕೆಯವರು ನೀಡಿದರು ಎಂದು ಮುಕ್ತ ಕಂಠದಿಂದ ಪ್ರಶಂಸಿಸಿದರು.



ಬಂಟರ ಸಂಘ ಹಲವಾರು ಸಮಾಜಮುಖಿ ಕಾರ್ಯಕ್ರಮಗಳೊಂದಿಗೆ ಹೊಸ ಅಧ್ಯಾಯವನ್ನು ಕಂಡಿದ್ದೇವೆ ಅದರಲ್ಲಿ ಕಂಕಣ ಭಾಗ್ಯದ ಮತ್ತೊಂದು ಪುಟವನ್ನು ಸೇರಿಸುವಲ್ಲಿ ಯಶಸ್ವಿಯಾದ ವಿವಾಹ ವೇದಿಕೆ ಸಮಿತಿಯ ಸದಸ್ಯರಿಗೆ ಆಡಳಿತ ಮಂಡಳಿಯವರು ಹಾಗೂ ಕಾರ್ಯಕಾರಿ ಸಮಿತಿಯವರು ಪ್ರಶಂಸೆಯನ್ನು ತಿಳಿಸಿ, ಸಂಚಾಲಕರಾದ ಶ್ರೀ ಸುರೇಂದ್ರ ಶೆಟ್ಟಿಯವರು ವಂದನಾರ್ಪಣೆಯನ್ನು ನೆರವೇರಿಸಿದರು. ಕಾರ್ಯಕಾರಿ ಸದಸ್ಯರಾದ ಶ್ರೀ ಎಸ್. ಸುಧಾಕರ ಶೆಟ್ಟಿಯವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.

| | |
|---|---|
| **ಸುರೇಂದ್ರ ಶೆಟ್ಟಿ ಎ.** | **ಶೋಭ ಶೇಕ** |
| ಸಂಚಾಲಕರು, ವಿವಾಹ ವೇದಿಕೆ ಸಮಿತಿ | ಚೇರ್‌ಪರ್ಸನ್, ವಿವಾಹ ವೇದಿಕೆ ಸಮಿತಿ |

# ಶ್ರೀಮತಿ ರೇವತಿ ಶೆಟ್ಟಿ ಕೋಟ ಅವರ ಕೃತಿಗಳ ಲೋಕಾರ್ಪಣೆ ಸಮಾರಂಭ

ಪ್ರಾಂಜಲ ಪಬ್ಲಿಕೇಷನ್ಸ್ ಅವರ ಸಹಭಾಗಿತ್ವದಲ್ಲಿ ಲೇಖಕಿ ರೇವತಿ ಶೆಟ್ಟಿ ಕೋಟ ಅವರ ಕಥಾಸಂಕಲನ 'ಕಸೂತಿಯಾಗದ ದಾರದುಂಡೆ' ಹಾಗೂ ಅಂಕಣ ಬರಹಗಳ 'ಬೆಳ್ಳಿ ಚುಕ್ಕಿ' ಕೃತಿಗಳ ಲೋಕಾರ್ಪಣೆ ಸಮಾರಂಭವು 25.03.2023, ಶನಿವಾರದಂದು ಬೆಂಗಳೂರಿನಲ್ಲಿ ನಡೆಯಿತು.


ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ನಿವೃತ್ತ ಡೀನ್ ಬಿ.ಎಸ್. ರಾಘವೇಂದ್ರ, "ಓದುಗರನ್ನು ವಿಭಿನ್ನ ಲೋಕಕ್ಕೆ ಓದಿಸಿಕೊಂಡು ಹೋಗುವಂತಹ ಕೃತಿ ಇದಾಗಿದ್ದು, ನೋವು ನಲಿವುಗಳ ಹೂರಣವಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡ ಪುಸ್ತಕಗಳ ಕೊಡುಗೆ ಬಹಳಷ್ಟಿದೆ. ಆದರೆ, ಪುಸ್ತಕದ ಓದುವಿಕೆಯೇ ನಿಂತುಹೋಗಿದೆ. ಬರವಣಿಗೆ ಒಂದು ಒಳ್ಳೆಯ ಹವ್ಯಾಸವಾಗಿದ್ದು, ಅದನ್ನು ಇಂದಿನ ಬೆಳೆಯುತ್ತಿರುವ ಮಕ್ಕಳಿಗೆ ಕಲಿಸಬೇಕಾಗಿದೆ" ಎಂದರು.



ಲೇಖಕಿ, ಕುಸುಮ ಆಯರಹಳ್ಳಿ, "ನಮ್ಮ ಸಮಾಜ ನಮ್ಮ ಮೇಲೆ ಹೇರಿರುವ ಚೌಕಟ್ಟುಗಳ ಆಚೆಗೆ, ನಮ್ಮೊಳಗೆ ಒಂದು ಹಂತದ ಬದುಕಿನ ಕುರಿತ ಆಲೋಚನೆಗಳು ಮೂಡುತ್ತವೆ. ನಮ್ಮ ಬದುಕು ಹೀಗೆ ಇರಬೇಕಿತ್ತು ಅನ್ನಿಸುವ ನಮ್ಮೊಳಗಿನ ಆಶಯಕ್ಕೆ ಈ ಕೃತಿಯು ಉತ್ತರವಾಗಿದೆ. ಕತೆಗಾರ್ತಿ ನೈಜ ಸಂಬಂಧಗಳನ್ನು ಕಾಪಾಡಿಕೊಂಡು ಬಂದಿರುವ ಕಾರಣದಿಂದಲೇ ಇಂತಹ ಅದ್ಭುತವಾದ ಕಥಾಸಂಕಲನ ಹೊರಬರಲು ಸಾಧ್ಯವಾಯಿತು. ರೇವತಿ ಅವರ ಕತೆಗಳಲ್ಲಿ ವಿನಯವಂತಿಕೆ ಅಡಗಿದೆ" ಎಂದು ತಿಳಿಸಿದರು.

ಲೇಖಕ ವಿಕಾಸ್ ನೇಗಿಲೋಣಿ, "ರೇವತಿ ಅವರ ಕತೆಗಳಲ್ಲಿ ನನ್ನ ಜಗತ್ತಿನಲ್ಲಿದ್ದಂತಹ ಮುಗ್ಧತೆಯ ಚಿತ್ರಣಗಳನ್ನು ಅನುಭವಿಸಿದೆ. ಇವತ್ತಿನ ಕಾಲಘಟ್ಟದಲ್ಲಿ ಒಬ್ಬ ಸಾಹಿತಿಯಾದವ ತನ್ನ ಕಾಲಘಟ್ಟದ ರಾಜಕೀಯ ವಿಚಾರಗಳಿಗೆ ಪ್ರತಿಕ್ರಿಯಿಸುವುದು ಅನಿವಾರ್ಯ ಅನ್ನುವಂತಹ ಕಾಲಘಟ್ಟದಲ್ಲಿ ನಾವಿದ್ದೇವೆ. ಬರವಣಿಗೆ ನಮ್ಮ ಭಾವನೆಗಳನ್ನು ನಮ್ಮ ವಿಚಾರವನ್ನು ಅಭಿವ್ಯಕ್ತಗೊಳಿಸಬಲ್ಲ ಒಂದು ಮಾಧ್ಯಮ. ಎಲ್ಲ ರೀತಿಯ ಭಾವನೆಗಳಿಗೂ ಬರವಣಿಗೆಯೇ ಮೂಲವಾಗಿದೆ. ಇನ್ನು ಕೃತಿಯೊಂದು ನಿಮ್ಮ ಸ್ಥಳೀಯ ಕತೆಯನ್ನು ಹೇಳುತ್ತಲೇ, ರಾಷ್ಟ್ರಮಟ್ಟಕ್ಕೂ ತಲುಪುವ ಸಾಧ್ಯತೆ ಇದೆ. ಈ ರೀತಿ ಬೇರೆ ಬೇರೆ ಮಟ್ಟಕ್ಕೆ ಹೋಗುವಂತಹ ಒಂದು ಕಾಲದಲ್ಲಿ ನಾವಿದ್ದೇವೆ. ಪ್ರಸ್ತುತ ದಿನಗಳಲ್ಲಿ ಓದುವವರು ಕಡಿಮೆಯಾಗಿದ್ದು, ಕತೆಗಾರರು ಜಾಸ್ತಿಯಾಗಿದ್ದಾರೆ. ಆದರೆ ನಾವು ಗಮನಿಸಬೇಕಾಗಿದ್ದು, ಕತೆಗಾರರು ಜಾಸ್ತಿಯಿಲ್ಲ. ಕೇಳುಗರು ಕಮ್ಮಿಯಾಗಿದ್ದಾರೆ ಎಂಬುವುದನ್ನು" ಎಂದು ಅಭಿವ್ಯಕ್ತಪಡಿಸಿದರು.

ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆ, "ಸಾಹಿತ್ಯ ಕ್ಷೇತ್ರದಲ್ಲಿ ಬೆಳೆಯುತ್ತಿರುವ ರೇವತಿ ಅವರು ನಮ್ಮ ಬಂಟರ ಸಂಘದ ಆಸ್ತಿ. ಮುಂದಿನ ದಿನಗಳಲ್ಲಿ ಕಾರ್ಯಕ್ರಮಗಳಲ್ಲಿ ಕಿರು ಕಾಣಿಕೆಗಳನ್ನು ಕೊಡುವಾಗ ಪುಸ್ತಕ ನೀಡುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು. ಆಗ ಪುಸ್ತಕ ಓದುವ ಹವ್ಯಾಸವು ಬೆಳೆಯುತ್ತದೆ," ಎಂದರು.



ಲೇಖಕಿ ರೇವತಿ ಶೆಟ್ಟಿ, "ಕಸೂತಿಯಾಗದ ದಾರಗಳು ಕಥಾಸಂಕಲನದ ಮೂಲಕ ಕತೆ ಎನ್ನುವಂತಹ ಪರಿಕಲ್ಪನೆಯನ್ನು ಓದುಗರಿಗೆ ಒದಗಿಸಿದ್ದೇನೆ ಅಷ್ಟೇ. ಇಲ್ಲಿನ ಪ್ರತಿಯೊಂದು ಕತೆಗಳನ್ನು ನಾನು ಸತ್ಯದ ಪರದೆಯ ಮೇಲೆ ಬರೆದಿದ್ದೇನೆ. ಇಲ್ಲಿನ ಘಟನೆಗಳು ನಾನು ಹಲವರ ಜೀವನದಲ್ಲಿ ನೋಡಿರುವ ಸತ್ಯಸಂಗತಿಗಳಾಗಿವೆ. ಅದಕ್ಕೆ ಬಣ್ಣವನ್ನು ಹಚ್ಚಿ ಬರವಣಿಗೆಯ ರೂಪ ನೀಡಿದ್ದೇನೆ" ಎಂದು ತಿಳಿಸಿದರು.

ನಿವೃತ್ತ ವಿಜ್ಞಾನಿ, ಬೆಂಗಳೂರಿನ ವಾಗ್ದೇವಿ ವಿಲಾಸ ಸಮೂಹ ಸಂಸ್ಥೆಗಳ ಸಂಸ್ಥಾಪಕ ಕೆ. ಹರೀಶ್, "ನಾವು ಓದುಗರಾದಾಗ ಎಷ್ಟು ಜನರ ಜೀವನದ ಅನುಭಗಳು ನಮಗೆ ಆಯಾಚಿತವಾಗಿ ಸಿಗುತ್ತವೆ. ಜೀವನದಲ್ಲಿ ಯಶಸ್ಸು ಅನ್ನುವಂತಹದ್ದು ಜೀವನವನ್ನು ಪರಿಪೂರ್ಣವಾಗಿ ಅನುಭವಿಸುವಂತಹದ್ದು. ನಮ್ಮಲ್ಲಿರುವ ದೌರ್ಬಲ್ಯವನ್ನು ಮೀರಿ, ಜೀವನದಲ್ಲಿ ಗರಿಷ್ಠ ಮೌಲ್ಯವನ್ನು ಪಡೆಯಲು ಸಾಧ್ಯವಾಗುವುದೇ ನಮ್ಮ ಯಶಸ್ಸಿನ ಮೂಲಕ. ರೇವತಿ ಅವರ ಬರವಣಿಗೆಯಲ್ಲಿ ಇಂತಹ ಹಲವಾರು ಸರಳ ನಿರೂಪಣೆಯ ಮೌಲ್ಯಯುತವಾದ ಕತೆ, ಲೇಖನಗಳನ್ನು ಕಾಣಬಹುದಾಗಿದೆ" ಎಂದರು.

ಕಾರ್ಯಕ್ರಮ ಬಹಳ ಅಚ್ಚುಕಟ್ಟಾಗಿ ನಡೆದಿದ್ದು ಒಂದು ಹೊಸ ಅನುಭವಕ್ಕೆ ತೆರೆಯುವಂತಾಗಿಸಿತು. ಗಣ್ಯರು, ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು. ಶ್ರೀಮತಿ ರೇವತಿ ಶೆಟ್ಟಿಯವರು ಬೆಂಗಳೂರು ಬಂಟರ ಸಂಘದ ಸದಸ್ಯೆ. ಇವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಅಭಿನಂದನೆಗಳು.

# ಪುಣೆ ಬಂಟ್ಸ್ ಅಸೋಸಿಯೇಷನ್‌ನ ದಶಮಾನೋತ್ಸವ ಸಂಭ್ರಮ ಸಭೆ





ಪುಣೆ ಬಂಟ್ಸ್ ಅಸೋಸಿಯೇಷನ್‌ನ ದಶಮಾನೋತ್ಸವ ಸಂಭ್ರಮ ಸಭೆ ಫೆಬ್ರವರಿ 4ನೇ ತಾರೀಕಿನಂದು ಪುಣೆಯಲ್ಲಿ ಜರುಗಿತು. ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಮುರಲೀಧರ ಹೆಗ್ಡೆಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಅಸೋಸಿಯೇಶನ್‌ನ ಅಧ್ಯಕ್ಷರಾದ ಶ್ರೀ ಗಣೇಶ್ ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಡಾ। ಜಯಕರ ಶೆಟ್ಟಿಯವರು ಗೌರವ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ। ಜಯಕರ ಶೆಟ್ಟಿಯವರು ಮಾತನಾಡಿ ಸಾಧನೆಯ ಮೆಟ್ಟಿಲೇರಲು ನಮ್ಮ ಶಕ್ತಿ ಯುಕ್ತಿಯ ಜೊತೆಗೆ ನಮ್ಮ ಛಲ, ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಹೋದಾಗ ಕರ್ಮದ ಫಲ ತಾನಾಗಿಯೇ ಬರುತ್ತದೆ. ನಮ್ಮಲ್ಲಿ ಜ್ಞಾನ ಸಂಪಾದನೆ ಎಂಬುವುದು ಬಹಳ ಮುಖ್ಯ, ಬಾಲ್ಯದಲ್ಲಿಯೇ ಮಕ್ಕಳಿಗೆ ಜೀವನದ ಮೌಲ್ಯಗಳನ್ನು ತಿಳಿಸಿಕೊಡುವ ಜೊತೆಗೆ ಯುವ ಪ್ರತಿಭೆಗಳನ್ನು ಸತ್ಪ್ರಜೆಗಳಾಗಿ ಬೆಳೆಸಬೇಕಾದ ಕಾರ್ಯ ನಡೆಯಬೇಕಿದೆ ಎಂದರು.

ಶ್ರೀ ಮುರಲೀಧರ ಹೆಗ್ಡೆಯವರು ಮಾತನಾಡಿ, ಬಂಟರು ಎಲ್ಲೇ ಹೋದರೂ ಸ್ವಸಾಮರ್ಥ್ಯದಿಂದ ತಮ್ಮನ್ನು ತಾವು ಬೆಳೆಸಿಕೊಂಡ ರೀತಿ ಇತರರಿಗೆ ಮಾದರಿಯಾಗಿದೆ. ನಮ್ಮ ಸಮಾಜದ ಮಕ್ಕಳಿಗೆ ಸಂಸ್ಕಾರ, ಜ್ಞಾನ ಸಂಪಾದನೆಯ ಮಾರ್ಗವನ್ನು ಮೊದಲು ಕಲಿಸಿಕೊಡಬೇಕು, ಶಿಕ್ಷಣವೆಂದರೆ ಬರೀ ಅಂಕಗಳಿಸುವುದಲ್ಲ, ವಿದ್ಯೆಯೊಂದಿಗೆ ಸಂಸ್ಕೃತಿ ಹಾಗೂ ಬೇರೆ ಬೇರೆ ರೀತಿಯ ಜ್ಞಾನವೂ ಅಗತ್ಯ. ಸಮಾಜದಲ್ಲಿ ಸಹಬಾಳ್ವೆಯ ಜೀವನ ಮಾಡುವ ಮನೋಭಾವ ಇದ್ದಾಗ ಬಂಟ ಸಮಾಜದಲ್ಲಿ ಇನ್ನಷ್ಟು ಉತ್ತಮ ಕಾರ್ಯಗಳು ನಡೆಯಲು ಸಾಧ್ಯ ಎಂದು ನುಡಿದರು.

ಸಭೆಯಲ್ಲಿ ಹಲವಾರು ಗಣ್ಯರು, ಪುಣೆ ಬಂಟರ ಸಂಘದ ಪದಾಧಿಕಾರಿಗಳು ಹಾಜರಿದ್ದು, ಹಿಂದಿನ ಅಧ್ಯಕ್ಷರುಗಳನ್ನು ಹಾಗೂ ಇತರ ಪ್ರತಿಭಾವಂತ ಗಣ್ಯರನ್ನು ಸನ್ಮಾನಿಸಲಾಯಿತು.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ಸದಸ್ಯತ್ವ ಸಮಿತಿ

**ಬೆಂಗಳೂರಿನಲ್ಲಿ ನೆಲೆಸಿದ್ದು, ಸಂಘದ ಸದಸ್ಯರಾಗಬಯಸುವ ಸಮುದಾಯ ಬಾಂಧವರು ಸಂಘದ ಕಛೇರಿಯನ್ನು ಸಂಪರ್ಕಿಸಿ, ಸದಸ್ಯತ್ವ ಅರ್ಜಿಯನ್ನು ಪಡೆಯಬಹುದಾಗಿದೆ.**

**ಸದಸ್ಯರಿಗೆ ದೊರಕುವ ಸೌಲಭ್ಯಗಳು :–**

- **ಸಭಾಭವನ ಉಪಯೋಗಕ್ಕೆ ರಿಯಾಯಿತಿ.**
- **ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಸೌಲಭ್ಯಗಳು.**
- **ಅಜೀವ ಸದಸ್ಯತ್ವ.**
- **ಸಂಘದ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಲು ಅವಕಾಶ.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಪಳ್ಳಿ ವಿಶ್ವನಾಥ್ ಶೆಟ್ಟಿ**
ಸಂಚಾಲಕರು

**ಸದಸ್ಯತ್ವ ಸಮಿತಿ**

**ಶ್ಯಾಮಲಾ ಶೆಟ್ಟಿ**
ಚೇರ್‌ಪರ್ಸನ್

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸದಸ್ಯತ್ವ ಸಮಿತಿ ಸದಸ್ಯರು

# ಅಭಿನಂದನೆಗಳು



## ಕೆ. ಎಂ. ಸಿ ಡೀನ್ ಆಗಿ ಡಾ|| ಪದ್ಮರಾಜ ಹೆಗ್ಡೆ ನೇಮಕ

ಮಣಿಪಾಲದ ಪ್ರತಿಷ್ಠಿತ ಕಸ್ತೂರ್ ಬಾ ವೈದ್ಯಕೀಯ ಕಾಲೇಜಿನ ಮುಖ್ಯಸ್ಥರಾಗಿ (ಡೀನ್) ಡಾ| ಪದ್ಮರಾಜ ಹೆಗ್ಡೆಯವರು ನೇಮಕಗೊಂಡಿದ್ದಾರೆ. ಇವರು ಕೆ.ಎಂ.ಸಿ.ಯ ಹಳೆ ವಿದ್ಯಾರ್ಥಿ. M.S, MCH, FIMS, FRCS, MBA ಪದವೀಧರರಾದ ಡಾ| ಹೆಗ್ಡೆಯವರು ಮಾಂಬೆಟ್ಟು ಶ್ರೀ ದಿವಾಕರ ಹೆಗ್ಡೆ ಮತ್ತು ಬೇಳಂಜೆ ಶ್ರೀಮತಿ ಕಾಂತಿ ಡಿ. ಹೆಗ್ಡೆಯವರ ಪುತ್ರ.

ಪದ್ಮರಾಜ ಹೆಗ್ಡೆಯವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮಣಿಪಾಲದ ಮಾಧವ ಕೃಪಾ ಮತ್ತು ಎಂಜೆಸಿಯಲ್ಲಿಯೂ, ಪಿಯುಸಿಯನ್ನು ಉಡುಪಿಯ ಎಂಜಿಎಂ ಕಾಲೇಜಿನಲ್ಲಿಯೂ ಪೂರೈಸಿದರು. ಮುಂದೆ ಎಂ.ಬಿ.ಬಿ.ಎಸ್ ಪದವಿಯನ್ನು ಮಣಿಪಾಲದ ಕೆಎಂಸಿಯಿಂದ ಅತ್ಯುಚ್ಚ ಶ್ರೇಣಿಯಲ್ಲಿ ಪಡೆದರು. ಅನಾಟಮಿ ವಿಭಾಗದಲ್ಲಿ ಪ್ರಥಮ ಸ್ಥಾನವನ್ನೂ, ಪೆಥಾಲಜಿ ವಿಭಾಗದಲ್ಲಿ ವಿಶ್ವ ವಿದ್ಯಾನಿಲಯಕ್ಕೆ 3ನೇ ರ‍್ಯಾಂಕನ್ನು ಪಡೆದರು.

ಜನರಲ್ ಸರ್ಜರಿಯಲ್ಲಿ ಎಂ.ಎಸ್. ಮತ್ತು ಯುರೋಲಜಿಯಲ್ಲಿ ಎಂ.ಸಿ.ಎಚ್ ಪದವಿಗಳನ್ನು ತನ್ನ ಮಾತೃ ಸಂಸ್ಥೆಯಲ್ಲಿಯೇ ಪೂರೈಸಿದರು. ಸ್ಕಾಟ್ಲೆಂಡಿನ ಗ್ಲಾಸ್ಗೋ ವಿಶ್ವ ವಿದ್ಯಾನಿಲಯದ ಎಫ್.ಆರ್.ಸಿ.ಎಸ್ ಮತ್ತು ಹಾಸ್ಪಿಟಲ್ ಅಡ್ಮಿನಿಸ್ಟ್ರೇಶನ್‌ನಲ್ಲಿ ಎಂ.ಬಿ.ಎ ಪದವಿ ಪಡೆದಿದ್ದಾರೆ.

2017ರಲ್ಲಿ ಇವರಿಗೆ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಶ್ರೀಯುತರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಅಭಿನಂದನೆಗಳು.

# I Had No Choice



Samanvitha Shetty

Choose what you want – this is a common statement when you visit an ice-cream parlor. There are so many flavors that we sometimes fail to decide on one. Our mind is so fickle that it always wants more than what we get. If it is just ice-cream that we have to choose, then we always have multiple chances to try a different flavor every time we visit the place. When choices made decide your ways of living then be cautions to accept the choice to ensure there will be no regrets. Not always we get chance to choose what we want. Accept the surprises of life gracefully because not everyone gets the chance to show gratitude to the gift of life.

When we visit a restaurant, we always feel dish ordered at another table is more delicious and interesting than ours, when we drive, the lane next to us always moves faster than ours, dress, watch, jewellery, gadgets, house, car, everything always looks better what others have than what we possess. All these and many more contribute to our ways of living. We always hear people saying "I had no choice, so had to do this" but whether there was choice or not, did you accept what you received? That acceptance is what makes the difference in life and how you utilize that which remains as an integral part of your being.



*Choice will Smile when you Smile at it. Make a positive difference with acceptance and see life with a new perspective which will surprise the perception which the choice holds.*

I am an engineer not by choice. This was chosen for me by my father. I accepted it with a heavy heart but cleared it with distinction. This degree gave me my first job, my future and to an extent even my marriage. Acceptance of something which is not our choice is always challenging because at every step we look for reasons to blame it on others. My marriage was another such decision which was done for me by my parents. It was my sister who told me one thing which helped me accept what was coming my way without my wish and will. She saw an upset little sister and told no matter what you do, nothing will change and eventually you have to accept what is happening. So why don't you take that first step of acceptance and then change it the way you want with love. It was not easy, but I listened to her and started accepting the relationship though not whole heartedly. As she told, eventually that became the most beautiful relationship of my life because I started falling in love with that acceptance.

We always plan our future, but God has his own plot set up. This may come to us from various ways which we fail to see. When we are forced or obligated to do something which is not our choice at the back of our mind, we always have a thought that if something goes wrong, I can always say: "I was forced to do and had no choice", so ultimately clear our conscious by blaming it on others or the situation. It is always easy to find fault in others  to escape from a guilty mind. But when you accept someone else's choice and step into that, it becomes part of your life. Your life is what you do out of it no matter who decided what for you and even if you had no choice.

Acceptance is a very difficult step in life. Not everything is allowed to accept by our mind but without accepting, we can never move forward. When we are stuck with something like anger, success, failure, past, society, prestige etc, until we know we are stuck we can never move on. That acknowledgement comes only with acceptance. Most of the time there are questions asked: "given a choice what do you want to do….? We think and attempt to answer knowing it is just a thought. But if we can think of making a difference hypothetically, accepting that thought can make the difference in reality too.

My dad was an agricultural officer and hence posted in some of the most remote areas of the state. When I was in 3rd grade, we were transferred to Bannur, a small village near Mysore. There was only one English Medium School which did not even have bench or desk in classroom. Kids were seated on the floor. My mother cried when she saw the school thinking she went to a better school than I was about to go. But we had no choice. Very soon the management of the school did organise for bench and desk and the first class to which it came was mine. This place was not our choice, but we had to accept that the next couple of years our life will be confined to this unpleasant reality which we never wanted to dream of. It was here I was put to my school's English teacher's tuition class where my parents handed over "Wren & Martin" with me to take to the tuition class and put a strong base for my English grammar. I never went to her classes to learn anything which was part of school syllabus. I was there only to learn this ocean of English Grammar. No matter the choice was ours or not, we did change that to something beautiful by acceptance and then looking for opportunity to help us change the situation to make our life worthwhile.

Acceptance is the key to every lock in life.

We can see the solution to any problem when we accept it.

We can learn from every mistake when we accept it.

We can change every failure to an experience when we accept it.

We can make every choice as ours when we accept it.

Life is much more than finding faults.

Life is much more than blaming others.

Life is more of choices made by us and others and their acceptance to build beautiful memories and make worthwhile changes so that choices made by us or someone else always turns out to be something we grow with positively.

Every moment in life comes only once.

Every decision we take can happen only once.

Every accident we face can occur only once.

Do not regret if the choice is not yours.

We will regret if we don't accept that choice and do nothing about it. So, accept it and acknowledge it to make your life what you always wanted it to be.

**Life is not a choice we make, when we don't regret that why regret the choices that make life?!**

## Congratulations



**Dr. Sharan Kumar Shetty** has been awarded "Adhyapak Award of the Year" by Teachers MitraTrust, Hubli.The citation was presented by the Vice Chancellor of Davanagere University, Prof. B.D. Kumbar. Dr. Sharan Kumar Shetty is working as Associate Professor, MNS Institution of Management, Mangalore. Bunts Sangha Bangalore congratulates and wishes him all the best.

# ರಾಜಕೀಯ ನಾಯಕರಿಗೆ ವಿಶೇಷ ಆದ್ಯತೆ–ಸ್ವೀಡನ್ ಮಾದರಿ


ಎ. ಗಿರೀಶ್ ರೈ

**"ದಿ ಟ್ರಾನ್ಸ್‌ಫೆರೆನ್ಸಿ ಇಂಟರ್‌ನ್ಯಾಷನಲ್"** ಪ್ರತೀವರ್ಷ ವಿಶ್ವದ ಬೇರೆ ಬೇರೆ ದೇಶಗಳ ಭ್ರಷ್ಟಾಚಾರದ ಇ ಇಂಡೆಕ್ಸ್ ಪ್ರಕಟಿಸುತ್ತದೆ. ಈ ಸಂಸ್ಥೆ ಸುಮಾರು ಇನ್ನೂರು ದೇಶಗಳ ಸರಕಾರಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿವರಗಳನ್ನು ನಾನಾಮೂಲಗಳಿಂದ ಸಂಗ್ರಹಿಸಿ ಪರಿಶೀಲಿಸಿದ ನಂತರ ವರದಿಯನ್ನು ಬಿಡುಗಡೆ ಮಾಡುತ್ತದೆ. ಟ್ರಾನ್ಸ್‌ಫೆರೆನ್ಸಿ ಇಂಟರ್ ನ್ಯಾಷನಲ್‌ನ ವರದಿಯನ್ನು ಗಮನಿಸಿದರೆ ಸ್ಕ್ಯಾಂಡಿನೇವಿಯನ್ ವಲಯದ ದೇಶಗಳಲ್ಲಿ ಭ್ರಷ್ಟಾಚಾರ ಅತ್ಯಂತ ಕಡಿಮೆ ಇರುವುದು ಕಂಡು ಬರುತ್ತಿದೆ.

ಸ್ವೀಡನ್ ದೇಶದ ಸರ್ಕಾರದಲ್ಲಿ ಭ್ರಷ್ಟಾಚಾರ ತೀರಾ ಕಡಿಮೆ ಇದ್ದು ಇದು ಹೆಚ್ಚು ಕಮ್ಮಿ uncorruptible ಸರಕಾರವೆಂದು ಭಾವಿಸಲಾಗಿದ್ದು, 2019ರ ವರದಿಯಂತೆ ಈ ದೇಶ ಇಂಡೆಕ್ಸ್‌ನಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಈ ಸಂಸ್ಥೆ ಭ್ರಷ್ಟಾಚಾರವನ್ನು Miss use of public power for private benefit ಎಂದು ವಿವರಿಸಿದೆ. ಇದು ಮುಖ್ಯವಾಗಿ ರಾಜಕೀಯ ಮತ್ತು ಸರ್ಕಾರಿ ವಲಯದಲ್ಲಿ ನಡೆಯುವುದಾಗಿದೆ.

ಭಾರತ ಪ್ರಪಂಚದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶ, **ದಿ ಇಕಾನಮಿಸ್ಟ್ ಮ್ಯಾಗಸೀನ್‌ನ ಇಂಟಲಿಜೆನ್ಸ್** ಘಟಕ 2016–17ರ ಅವಧಿಯಲ್ಲಿ ಪ್ರಪಂಚದ ನಾನಾ ದೇಶಗಳ ಸರಕಾರಗಳ ಭ್ರಷ್ಟಾಚಾರದ ಕುರಿತು ಸಮೀಕ್ಷೆಯೊಂದನ್ನು ನಡೆಸಿತ್ತು. ಇದರಂತೆ ಪ್ರಜಾಪ್ರಭುತ್ವ ದೇಶಗಳು ರಾಜಮನೆತನಗಳು, ನಿರಂಕುಶ ಅಧಿಕಾರ (ಡಿಕ್ಟೇಟರ್ ಶಿಫ್) ಮತ್ತಿತರ ಒಟ್ಟು 167 ದೇಶಗಳ ಆಡಳಿತದ ಕುರಿತು ಮಾಹಿತಿ ಸಂಗ್ರಹಿಸಿತ್ತು. ಈ ಸಮೀಕ್ಷೆಯಲಿ ನಾರ್ವೆ ದೇಶ ಪ್ರಥಮ ಸ್ಥಾನದಲ್ಲಿದ್ದು, ಅತ್ಯಂತ ಉತ್ತಮ ಪ್ರಜಾಪ್ರಭುತ್ವ ದೇಶವೆಂದು ಪರಿಗಣಿಸಲಾಗಿತ್ತು. ಅಮೇರಿಕ ಈ ಪಟ್ಟಿಯಲ್ಲಿ 21ನೇ ಸ್ಥಾನದಲ್ಲಿತ್ತು ಭಾರತ 42ನೇ ಸ್ಥಾನದಲ್ಲಿತ್ತು. ಈ ಘಟಕ ಭಾರತ ದೋಷಪೂರಿತ ಪ್ರಜಾಪ್ರಭುತ್ವ **flawed Democracy** ಎಂದು ವರದಿ ಮಾಡಿತ್ತು. ಈ ಹಿನ್ನಡೆಗೆ ವಂಶಾಡಳಿತ ಮತ್ತು ಭ್ರಷ್ಟಾಚಾರ ಕಾರಣವೆಂದು ಅಭಿಪ್ರಾಯ ಪಟ್ಟಿತ್ತು. ಟ್ರಾನ್ಸ್‌ಫರೆನ್ಸ್‌ನ ಇಂಟರ್ ನ್ಯಾಷನಲ್ ಇಂಡೆಕ್ಸ್‌ನಲ್ಲಿ 2019ರಲ್ಲಿ ಭಾರತ 80ನೇ ಸ್ಥಾನದಲ್ಲಿತ್ತು.

**ಕ್ಲಾಡಿಯಾ ವೆಲ್ಲಿನ್** ಬ್ರೇಜಿಲ್ ದೇಶದ ಪ್ರಜೆ, ಪತ್ರಕರ್ತೆ ಮತ್ತು ಬರಹಗಾರ್ತಿ. ಬ್ರೆಜಿಲ್ ದೇಶ ಆಗ ಮಿಲಿಟರಿ ಡಿಕ್ಟೇಟರ್ ಆಡಳಿತದಲ್ಲಿದ್ದು, ಕ್ಲಾಡಿಯಾಗೆ ಪ್ರಜಾಪ್ರಭುತ್ವದ ಕುರಿತು ಯಾವುದೇ ಮಾಹಿತಿ ಇರಲಿಲ್ಲ. ಬ್ರೆಜಿಲ್‌ನಲ್ಲಿ ಮಿತಿಮೀರಿದ ಭ್ರಷ್ಟಾಚಾರ ಸಾಮಾನ್ಯವಾಗಿದ್ದು, ಜನರ ನಡುವೆ ತಾರತಮ್ಯ ಸಾಮಾಜಿಕ ಅಂತರ ಮುಂತಾದ ಆಚರಣೆಗಳು ಸರ್ವೇ ಸಾಮಾನ್ಯವಾಗಿತ್ತು. ಕ್ಲಾಡಿಯ ಸ್ವೀಡನ್ ದೇಶದ ಪ್ರಜೆಯನ್ನು ಮದುವೆಯಾಗಿದ್ದು, 2000ರ ಸುಮಾರಿನಲ್ಲಿ ಗಂಡನಮನೆ ಇರುವ ಸ್ಟಾಕ್ ಹೋಲ್ಮ್ ಪಟ್ಟಣಕ್ಕೆ ಬರುತ್ತಾರೆ. ಸ್ವೀಡನ್ ದೇಶದ ಆಡಳಿತ ಪದ್ಧತಿ ಜನಜೀವನ, ಮಾರ್ಕೇಟ್ ಎಲ್ಲಾ ಕಡೆಗಳಲ್ಲಿ ಯಾವುದೇ ಭಯ ಭೀತಿ ಇಲ್ಲದೆ ಅಲೆದಾಡುವ ಜನರು, ಇದೆಲ್ಲವನ್ನು ನೋಡುತ್ತಾ ಪ್ರಜಾಪ್ರಭುತ್ವದ ಆಹ್ಲಾದವನ್ನು ಅನುಭವಿಸುತ್ತಾ ಕ್ಲಾಡಿಯ ವೆಲ್ಲನ್ ಜೀವನ ಸಾಗುತ್ತದೆ. ಸ್ವೀಡನ್ ಪಾರ್ಲಿಮೆಂಟ್‌ನ ಮಾಹಿತಿಯನ್ನು ಕ್ಲಾಡಿಯಾ ಪಡೆದುಕೊಂಡಿದ್ದು ರಿಕ್ಸ್‌ಡಾಗ್‌ಡಿಯೆಟ್ ದೇಶದ ಪಾರ್ಲಿಮೆಂಟ್ ಏಕಸದನ ಮಂಡಲವಾಗಿದ್ದು, ಎಲ್ಲ ಮಹತ್ತರ ನಿರ್ಣಯಗಳು ಆದೇಶಗಳನ್ನು ನೀಡುವ ಅಧಿಕಾರಾಂಗವಾಗಿದೆ. ಇದು 1971ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, 349 ಸದಸ್ಯರಿದ್ದು ಇವರನ್ನು ನಾಲ್ಕು ವರ್ಷಗಳ ಅವಧಿಗೆ ಚುನಾಯಿಸಲಾಗುತ್ತಿದೆ. ಈ ಪಾರ್ಲಿಮೆಂಟ್ ಭವನ ಸ್ಟಾಕ್ ಹೋಲ್ಮ್ ಮಧ್ಯಭಾಗದ ಹೆಲ್ಗೆಂದರ್ ಹೋಲ್ಮನಲ್ಲಿದ್ದು ರಿಕ್ಸ್‌ಡಾಗ್ ಪಾರ್ಲಿಮೆಂಟ್ ಪ್ರಜಾಪ್ರಭುತ್ವದ ಕೆಲಸ ಕಾನೂನು ರಚನೆ, ಸಂವಿಧಾನ ತಿದ್ದುಪಡಿ ದೇಶದ ರಾಜಕೀಯ ಪಕ್ಷಗಳ ನಾಯಕನನ್ನು ಪ್ರಧಾನಿ ಪದಕ್ಕೆ ಸೂಚಿಸುವುದೇ ಮೊದಲಾದ ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಅಲ್ಲಿಯ ನಾಯಕರು ಸಚಿವರು ಮತ್ತಿತರ ಗಣ್ಯರ ಮಾಹಿತಿಯನ್ನು ಪತ್ರಕರ್ತೆ ಸಂಗ್ರಹಿಸುತ್ತಾಳೆ. ಮುಂದೊಂದು ದಿನ ಕ್ಲಾಡಿಯ ಸ್ಟಾಕ್‌ಹೋಲ್ಮ್‌ನ ಒಂದು ಮಾಲ್‌ನಲ್ಲಿ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಲು ಹೋದಾಗ ಸ್ವೀಡನ್‌ನ ಮಾಜಿ ಪ್ರಧಾನಮಂತ್ರಿ ಮತ್ತು ಅಂದಿನ ವಿದೇಶಾಂಗ ಮಂತ್ರಿ ಕಾರ್ಲ್‌ಬಿಲ್ಡಾಟ್ ಸಾಮಾಗ್ರಿಗಳನ್ನು ತುಂಬಿಸುವ ತಳ್ಳುವ

ಗಾಡಿಯೊಂದಿಗೆ ಅಂಗಡಿ ಅವರಿಗೆ ಬೇಕಾಗಿರುವ ತರಕಾರಿ ಹಣ್ಣು ಇತ್ಯಾದಿಗಳನ್ನು ಆಯ್ಕೆ ಮಾಡಿ ತಳ್ಳುಗಾಡಿಯೊಂದಿಗೆ ನಡೆಯುತ್ತಿರುವುದನ್ನು ಕಂಡು ಆಶ್ಚರ್ಯಚಕಿತಳಾಗುತ್ತಾಳೆ. ಇಂತಹ ದೃಶ್ಯವನ್ನು ಬ್ರೇಜಿಲ್‌ನಲ್ಲಿ ನೋಡುವುದು ಅಸಾಧ್ಯವೇ ಸರಿ. ಬಹುತೇಕ ಎಲ್ಲಾ ದೇಶಗಳಲ್ಲಿ ರಾಜಕೀಯ ನೇತಾರರು ಅಂಗಡಿ ಸಾಮಾನುಗಳನ್ನು ಖರೀದಿಸಲು ಅಂಗಡಿ ಮಾಲ್‌ಗೆ ಹೋಗುವ ಉದಾಹರಣೆನೇ ಇಲ್ಲ. ಅವರೆಲ್ಲರಿಗೂ ಈ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಹಲವಾರು ಆಪ್ತ ಸಹಾಯಕರು ಚಾಕರಿಯವರು ಇದ್ದೇ ಇರುತ್ತಾರೆ. ಸ್ವೀಡನ್ ದೇಶದಲ್ಲಿ ಸ್ಪೀಕರ್ ಹುದ್ದೆ ಆ ದೇಶದ ಅತ್ಯಂತ ಉಚ್ಚ ರಾಜಕೀಯ ಹುದ್ದೆ. ಪ್ರಧಾನಿಗಿಂತಲೂ ಉನ್ನತ ಸ್ಥಾನ ಅಲಂಕರಿಸಿರುವ ನಾಯಕ ನೆಲಅಂತಸ್ತಿನಲ್ಲಿ ಸಬ್‌ವೇನಲ್ಲಿ ಟ್ರೈನ್‌ಗೆ ಕಾಯುತ್ತಿರುವುದನ್ನು ನೋಡಿ ಮತ್ತಷ್ಟು ಆಶ್ಚರ್ಯ ಪಡುತ್ತಾಳೆ. ಇನ್ನೊಂದು ದಿನ ವೆಲ್ಲಿನ್ ಸ್ಟೋಕ್‌ಹೋಲ್ಮ್‌ನ ಮೇಯರ್ ಗ್ರಾಸರಿ ಚೀಲವನ್ನು ಹಿಡಿದುಕೊಂಡು ಬಸ್‌ಗಾಗಿ ಕ್ಯೂನಲ್ಲಿ ನಿಂತುಕೊಂಡಿರುವುದನ್ನು ನೋಡುತ್ತಾಳೆ. ಇದಕ್ಕೆಲ್ಲ ಬಹುಮುಖ್ಯ ಕಾರಣ ಸ್ವೀಡನ್ ದೇಶದ corruption free Politics ಎಂದು ಹೇಳುತ್ತಾಳೆ. ಇವೆಲ್ಲವೂ ನಮ್ಮ ದೇಶದಲ್ಲಿ ಎಂದಾದರೂ ನೋಡಲು ಸಿಗಬಹುದೇ? ಇದು ಮೊಡೆಲ್ ಆಗಲಿದೆಯೇ. ಸ್ವೀಡನ್‌ನ ರಾಜಕೀಯ ನೇತಾರರ ಜೀವನ ತೆರೆದ ಪುಸ್ತಕದಂತೆ ಇದೆ. ಅವರೆಲ್ಲರೂ ಅತ್ಯಂತ ಪ್ರಾಮಾಣಿಕರು, ಜನಸೇವೆಯೆ ಅವರ ಮಿಶನ್, ಶುದ್ಧ ಹಸ್ತರು. ಜನಪರ ಕೆಲಸಗಳನ್ನು ಶೀಘ್ರವಾಗಿ ನೆರವೇರಿಸಿ ಸಂತ್ರಸ್ಥರಿಗೆ ಸಹಾಯ ಒದಗಿಸುವುದೇ ಇವರೆಲ್ಲರ ಗುರಿ. ಇಲ್ಲಿ ಪಾರ್ಲಿಮೆಂಟ್ ಸದಸ್ಯ ಪೂರ್ಣಾವಧಿಯ ಕೆಲಸವಾಗಿದ್ದು ಅವರಿಗೆ ನಿರ್ದಿಷ್ಟ ವೇತನ ನೀಡಲಾಗುತ್ತಿದೆ. ಇಂತಹ ಕಂಡು ಕೇಳರಿಯದ ದೃಶ್ಯಗಳನ್ನು ಕಣ್ಣಾರೆ ನೋಡಿದ ಕ್ಲಾಡಿಯ ವೆಲ್ಲಿನ್ **ಸ್ವೀಡನ್** ರಾಜಕೀಯ ನೇತಾರರ ಕುರಿತ ಪುಸ್ತಕವನ್ನು ಪ್ರಥಮ ಬಾರಿಗೆ ಬ್ರೆಜಿಲಿಯನ್ ಭಾಷೆಯಲ್ಲಿ ಬರೆದು ಪ್ರಕಟಿಸಿದ್ದಾಳೆ. ಇದು 2014ರಲ್ಲಿ ಬ್ರೇಜಿಲ್‌ನಲ್ಲಿ ಬೆಸ್ಟ್ ಸೆಲ್ಲಿಂಗ್ ಪುಸ್ತಕವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಅಲ್ಲಿನ ರಾಜಕೀಯ ನಾಯಕರು ಮುಖ್ಯವಾಗಿ ಎಂ.ಪಿ.ಗಳು ಕಛೇರಿಗೆ ಬಸ್‌ಗಳಲ್ಲಿ ಪ್ರಯಾಣ ಮಾಡುತ್ತಾರೆ. ಅವರು ಸರ್ಕಾರ ಒದಗಿಸುವ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಾರೆ. ಇದರ ವಿಸ್ತೀರ್ಣ 16 ಚದರ ಮೀಟರ್. ಅವರ ಬಟ್ಟೆಗಳನ್ನು ಅಲ್ಲಿರುವ ಲಾಂಡ್ರಿಗಳಲ್ಲಿ ತಾವೇ ಒಗೆದು ಸ್ವಚ್ಛಗೊಳಿಸಿಕೊಳ್ಳುತ್ತಾರೆ. ಸ್ವೀಡನ್ ದೇಶದಲ್ಲಿ ರಾಜಕೀಯ ನಾಯಕರಿಗೆ ಯಾವುದೇ ತರಹದ ಲಕ್ಸುರಿ ಮತ್ತು ವಿಶೇಷ ಆದ್ಯತೆ ನೀಡುವುದಿಲ್ಲ. ಎಲ್ಲರೂ ಸಮಾನರು, ಇವರುಗಳಿಗೆ ಸರ್ಕಾರ, ಸರ್ಕಾರದ ಸಂಚಾರಿ ವ್ಯವಸ್ಥೆಯಲ್ಲಿ ಓಡಾಡಲು ಕಾರ್ಡುಗಳನ್ನು ನೀಡಿದ್ದು, ಇದನ್ನು ಉಪಯೋಗಿಸಿ ವೆಚ್ಚವಿಲ್ಲದೆ ಪ್ರಯಾಣ ಮಾಡಬಹುದು. ಸ್ವೀಡನಿನ ಸೋಶಿಯಾಲಜಿಸ್ಟ್ ಜೆನ್ನಿಹನ್‌ಸ್ಸಾನ್ ಈ ಪಾರ್ಲಿಮೆಂಟ್ ಸದಸ್ಯರ ಕೆಲಸದ ಕುರಿತು ನಡೆಸಿದ್ದ ಒಂದು ಸಮೀಕ್ಷೆಯಂತೆ ಈ ಸದಸ್ಯರು ಒಂದು ವಾರದಲ್ಲಿ ಸರಾಸರಿಯಾಗಿ 60 ಘಂಟೆಯ ಕೆಲಸ ಮಾಡುತ್ತಾರೆ ಎಂದು ವರದಿ ಮಾಡಲಾಗಿತ್ತು. ಕ್ಲಾಡಿಯ ವೆಲ್ಲಿನ್ ಸ್ವೀಡನ್ ಕುರಿತು ಬರೆದ ಪುಸ್ತಕ ಅವಳು ಮಾಡಿದ ವಿಶೇಷ ವರದಿಗಳು ಬ್ರೆಜಿಲ್‌ನ ಯುವಕ ಯುವತಿಯರಲ್ಲಿ ವಿಶೇಷ ಉತ್ಸಾಹ ಮೂಡಿಸಿದ್ದು, ಸ್ವೀಡನ್ ಪ್ರಜೆಗಳು ಈ ತರದ ಮಾರ್ಪಾಡು ಮಾಡಿರುವಾಗ ನಮಗೇಕೆ ಇದು ಸಾಧ್ಯವಿಲ್ಲ ಎಂದು ಪ್ರಶ್ನಿಸಲು ಪ್ರಾರಂಭಿಸಿದ್ದಾರೆ ಎಂದು ವೆಲ್ಲಿನ ಅಭಿಪ್ರಾಯ. ವಿಶ್ವದ ಎಲ್ಲಾ ದೇಶಗಳಲ್ಲೂ ಈ ತರದ ರಾಜಕೀಯ ವ್ಯವಸ್ಥೆ ತರಲು ಖಂಡಿತಾ ಸಾಧ್ಯವಿದೆ. ನಾವೆಲ್ಲರೂ ಒಟ್ಟಾಗಿ ಆಯಾಯ ದೇಶಗಳಲ್ಲಿ ಒಮ್ಮನಸಿನಿಂದ **ವಿ.ಐ.ಪಿ ಕಲ್ಚರ್** ಇರಬಾರದು, ಯಾರಿಗೂ ವಿಶೇಷ ಆದ್ಯತೆ, ಪ್ರಥಮಾದ್ಯತೆ ನೀಡಬಾರದು, ಜನಪ್ರತಿನಿಧಿಗಳು ಜನಸೇವೆಯೇ ತಮ್ಮ ಗುರಿಯೆಂದು ಭಾವಿಸಿ ಸೇವೆಗೆ ಮುಂದಾದರೆ ಭ್ರಷ್ಟಾಚಾರ ಕೊನೆಗೊಂಡ ಡೈನಾಸ್ಟಿಕ್ ರೂಲ್ ಅಳಿದು ಹೋಗಲಿದೆ.

**ಪ್ರಜಾಪ್ರಭುತ್ವದ ಬಲವರ್ಧನೆಗೆ ಪ್ರಜಾಸತ್ತಾತ್ಮಕ ಜಾತ್ಯತೀತ ಸರಕಾರವನ್ನು ಅಧಿಕಾರಕ್ಕೆ ತರುವ ಹೊಣೆ ಜನರ ಕೈಯಲ್ಲಿದೆ. ಭಾರತದ ಭವಿಷ್ಯ ಜಾಗೃತ ಮತದಾರ, ಭ್ರಷ್ಟಾಚಾರ ಮುಕ್ತ, ಪರಿವಾರವಾದ ರಹಿತ, ದೇಶದ ಅಖಂಡತೆ ಮತ್ತು ಸಾರ್ವಭೌಮತೆಯನ್ನು ರಕ್ಷಿಸಲು ಸದಾ ಸಿದ್ಧರಿರುವ ಸುಶಿಕ್ಷಿತ ರಾಜಕಾರಣಿಗಳು ಮುಂದಾಗಬೇಕು. ಜನರ ಹಿತ ರಕ್ಷಣೆಗೆ ಆದ್ಯತೆ, ಆಳವಾದ ಜ್ಞಾನ ಹೊಂದಿರುವ ನಿಸ್ವಾರ್ಥಿ ಶುದ್ಧ ಹಸ್ತ ರಾಜಕಾರಣಿಗಳು ದೇಶದಲ್ಲಿ ಪ್ರಜಾಪ್ರಭುತ್ವ ಬಲಿಷ್ಟವಾಗಲು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಶುಭ ಸಂದರ್ಭದಲ್ಲಿ ಪೂರ್ಣ ಮತ್ತು ನಿರ್ಮಲ ಪ್ರಜಾಪ್ರಭುತ್ವ ಬೇರೂರಲಿ.**

# ಯಾರ ಪಾಲನೆ ಪೋಷಣೆ ಇಲ್ಲದೆ ಅರಳಿ ಯಾರೂ ನೋಡದಿದ್ದರೂ ತನ್ನ ಸೌಂದರ್ಯವನ್ನು ತೋರಿಸಿ, ಸುಗಂಧವನ್ನು ಬೀರಿ ಮರೆಯಾದ ಕಾಡು ಮಲ್ಲಿಗೆ, ಬಹುಮುಖೀ ವ್ಯಕ್ತಿತ್ವದ ಡಾ. ಬಿ. ಕೃಷ್ಣಾನಂದ ಹೆಗ್ಡೆ

ಭಾರತೀಯ ಸಮಾಚಾರ ಸೇವೆಯಲ್ಲಿ ಕೇಂದ್ರ ಸರಕಾರದ ಹಲವು ಪ್ರಚಾರ ಮಾಧ್ಯಮಗಳಲ್ಲಿ 3 ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ ಡಾ. ಬಿ. ಕೃಷ್ಣಾನಂದ ಹೆಗ್ಡೆಯವರು ಜಾಹೀರಾತು ಮತ್ತು ದ್ರಶ್ಯ ಪ್ರಚಾರ ಇಲಾಖೆಯ ನಿರ್ದೇಶಕರಾಗಿ, ಪತ್ರಿಕಾ ಪ್ರಚಾರ ಮತ್ತು ಕ್ಷೇತ್ರ ಪ್ರಚಾರ ವಿಭಾಗಗಳಲ್ಲಿ ಹಿರಿಯ ಅಧಿಕಾರಿಯಾಗಿ ಚಲನಚಿತ್ರ ಸೆನ್ಸಾರ್ ಮಂಡಳಿಯಲ್ಲಿ ಪ್ರಾದೇಶಿಕ ಅಧಿಕಾರಿಯಾಗಿ, ರಕ್ಷಣಾ ಸಚಿವಾಲಯದ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ, ಆಕಾಶವಾಣಿಯ ವಿಶೇಷ ಭಾತ್ಮಿದಾರರಾಗಿ, 1980ರ ದಶಕವಿಡೀ ಬೆಂಗಳೂರಿನಲ್ಲಿ ಕೇಂದ್ರ ಸರಕಾರದ ವಾರ್ತಾ ಇಲಾಖೆ (ಪಿಐಬಿ) ಯ ಮುಖ್ಯಾಧಿಕಾರಿಯಾಗಿ ಬಳಿಕ ಅಖಿಲ ಭಾರತ ಆಕಾಶವಾಣಿ ಸುದ್ದಿ ವಿಭಾಗದ ಜಂಟಿ ನಿರ್ದೇಶಕರಾಗಿ ನಿವೃತ್ತರಾದವರು.



ಕೇಂದ್ರ ಸರಕಾರದಿಂದ ನಿವೃತ್ತಿಯ ಬಳಿಕ ಮಣಿಪಾಲ ವಿವಿಯುಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ ಇವರು ತಾಪ್ಮಿ ಮೆನೆಜ್ಮೆಂಟ್ ಇನ್ಸ್ಟಿಟ್ಯೂಟ್‌ನಲ್ಲಿ ಸಮೂಹ ವಿಭಾಗದ ನಿರ್ದೇಶಕರಾಗಿದ್ದರು. ಮಣಿಪಾಲದಿಂದ ಪ್ರಕಟವಾಗುತ್ತಿದ್ದ "ಮಾರ್ನಿಂಗ್ ನ್ಯೂಸ್" ಆಂಗ್ಲ ದಿನಪತ್ರಿಕೆಯ ಸಂಪಾದಕರು ಆಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಬಳಕುಂಜೆ ದೊಡ್ಡಮನೆಯಲ್ಲಿ ದಿ. ಬಡಗಬೆಟ್ಟು ನಾರಾಯಣ ಹೆಗ್ಡೆ ಮತ್ತು ದಿ. ಬಳಕುಂಜೆ ದೊಡ್ಡಮನೆ ದ್ವಾರಕೀ ಎನ್. ಹೆಗ್ಡೆ ದಂಪತಿಗಳಿಗೆ 17.09.1935ರಂದು ಹಿರಿಯ ಪುತ್ರನಾಗಿ ಜನಿಸಿದ ಇವರು ದಿನಾಂಕ 03.02.2023ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು. ಉತ್ತಮ ಬರಹಗಾರರೂ ಆಗಿದ್ದ ಇವರು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ 11 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಎಂಜಿಎಂ ಕಾಲೇಜ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಕು. ಶಿ. ಹರಿದಾಸ ಭಟ್ಟರ ಪ್ರೋತ್ಸಾಹದಲ್ಲಿ ಕಾರ್ಲ್ ಮಾರ್ಕ್ಸ್‌ರ ಬಗ್ಗೆ ಬರೆದ ಪ್ರಥಮ ಪುಸ್ತಕ. ಚಾರಿತ್ರಿಕ ಸಂಶೋಧನೆಯಲ್ಲಿ ತೊಡಗಿಸಿಕೊಂಡು ಹಲವಾರು ಕೃತಿಗಳನ್ನು ಬರೆದಿದ್ದ ಇವರ ಕೃತಿಗಳಲ್ಲಿ ಕನ್ನಡ ಕರಾವಳಿಯ ಬಂಟ ಜನಾಂಗದ ಇತಿಹಾಸ (ಹಿಸ್ಟರಿ ಆಫ್ ಬಂಟ್ಸ್) ಹಾಗೂ ಭಗವದ್ಗೀತೆಯ ಕಾಲ ನಿರ್ಣಯದ ಮೇಲೆ ಬೆಳಕು ಚೆಲ್ಲುವ 2 ಕೃತಿಗಳೂ ಸೇರಿವೆ.

2014ರಲ್ಲಿ ಇವರು ಸಲ್ಲಿಸಿರುವ "ದಿ ಇನ್ಫ್ಲುಯೆನ್ಸ್ ಆಫ್ ಏನ್ಶಿಯೆಂಟ್ ಇಂಡಿಯನ್ ಮೆಡಿಸಿನ್" ಎಂಬ ಸಂಶೋಧನಾ ಬರಹಕ್ಕೆ ಮಂಗಳೂರು ವಿಶ್ವ ವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿದ್ದು ನಮ್ಮ ದೇಶದಲ್ಲೇ ಅತ್ಯಂತ ಹಿರಿಯ ವಯಸ್ಸಿಗರೊಬ್ಬರು ತಮ್ಮ 79ನೇ ವಯಸ್ಸಿನಲ್ಲಿ ಪಡೆದ ಪಿಎಚ್‌ಡಿ ಪದವಿ ಎಂಬ ವಿಶಿಷ್ಟ ದಾಖಲೆ ಹೊಂದಿದ್ದಾರೆ. ತಮ್ಮ ಇಳಿ ವಯಸ್ಸಿನಲ್ಲಿ 5 ವರ್ಷಗಳ ಕಾಲ ಸಂಶೋಧನೆ ಮಾಡಿ ಸಿದ್ದ ಪಡಿಸಿದ ಅತ್ಯಮೂಲ್ಯ ಮಾಹಿತಿಗಳನ್ನೊಳಗೊಂಡ ಪ್ರಬಂಧ ಇದಾಗಿದೆ. ಕಲಿಯುವ ಆಸಕ್ತಿ, ಜ್ಞಾನ ಸಂಪಾದನೆಯ ಮನಸ್ಸು ಇದ್ದರೆ ಕಲಿಕೆಗೆ ವಯಸ್ಸು ಯಾವತ್ತೂ ಅಡ್ಡಿಯಲ್ಲ, ಸಂಶೋಧನೆ ತನ್ನ ಮೂಲ ಪ್ರವೃತ್ತಿಯಾಗಿರುವುದರಿಂದ ನಿವೃತ್ತಿಯ ಬಳಿಕ ಪಿಎಚ್‌ಡಿ ಮಾಡಲು ಪ್ರೇರೆಪಿಸಿದ್ದು ಎನ್ನುವ ಮಾತನ್ನು ಹೇಳುತ್ತಿದ್ದರು.

ಮಾಧ್ಯಮಗಳಿಗೆ ಸರಕಾರದ ಸುದ್ದಿಗಳನ್ನು ನೀಡುವ ವೃತ್ತಿ ಆಯ್ದುಕೊಂಡಿದ್ದ ಇವರು ಮೂಲತಃ ಮಾಧ್ಯಮ ರಂಗದ ಪ್ರತಿಭೆ. ತನ್ನ ಇಳಿ ವಯಸ್ಸಿನಲ್ಲೂ 80ನೇ ವಯಸ್ಸಿನ ನಂತರವೂ ಪತ್ರಿಕಾ ರಂಗದ ನಂಟು ಇಟ್ಟುಕೊಂಡಿದ್ದ ಇವರು ಅಂತಾರಾಷ್ಟ್ರೀಯ ನಿಯತ ಕಾಲಿಕೆ ಮಂಗಳೂರಿನಿಂದ ಪ್ರಕಟವಾಗುತ್ತಿದ್ದ "ದ ಸೈನ್ಸ್ ಆಫ್ ಹೀಲಿಂಗ್ ಔಟ್‌ಕಂ" ಇದರ ವ್ಯವಸ್ಥಾಪಕ

ಸಂಪಾದಕರಾಗಿದ್ದರು. "ಏ ನ್ಯೂ ಲುಕ್ ಎಟ್ ಕ್ಲಾಸಿಕಲ್ ಗ್ರೀಸ್", "ಯೂರೋಪಿಯನ್ ಟ್ರವೆ ಲಾಗ್", "ವಾಯ್ಸಸ್ ಎಟ್ ಡಸ್ಕ್" ಎಂಬ ಕೃತಿಗಳನ್ನು ಪ್ರಕಟಿಸಿದ ಇವರು "ಅರ್ಲು ಕಬಿತೆಲು ಪೊರ್ಲು ಕವಿತೆಲು" ಎಂಬ ತುಳು ಕವನ ಸಂಕಲನವನ್ನು ಬರೆದು ಪ್ರಕಟಿಸಿದ್ದಾರೆ.

"ಸಂತೆಗೆನ್ನಯ ಬಳಿಗೆ ಬಂದವರು" ಇವರ ಆತ್ಮಕಥೆ ಕೊನೆಯ ಪ್ರಕಟನೆ. ಈ ಬಗ್ಗೆ ಹೇಳುವ ಅವರು ಈ ಕೃತಿ ಒಂದು ರೀತಿಯ ಶೋಧನೆ ಮತ್ತು ಆತ್ಮ ನಿವೇಧನೆ, ಆತ್ಮ ಕಥೆಯಲ್ಲ. ನನ್ನ ಆತ್ಮಕಥೆ ಬರೆಯುವಷ್ಟು ಎತ್ತರಕ್ಕೆ ನಾನೆಂದೂ ಹೋಗಿಲ್ಲ. ಕುತೂಹಲ ಎಂಬೊಂದು ಪ್ರವೃತ್ತಿ ಎಳೆಯ ವಯಸ್ಸಿನಿಂದಲೆ ನೆರಳಿನಂತೆ ನನ್ನ ಬೆನ್ನು ಹತ್ತಿಕೊಂಡು ಬಂದಿರುವುದರಿಂದ ಈ ಕುತೂಹಲವೇ ಬದುಕಿನ ಕಥೆ ಬರೆಯಲು ತನಗೆ ಪ್ರೇರಣೆ ಆಯಿತು ಎಂದು ನುಡಿದಿದ್ದರು ಅಗಲಿದ ಡಾ. ಬಿ. ಕೃಷ್ಣಾನಂದ ಹೆಗ್ಡೆಯವರು.

– ಸತ್ಯೋದಯ ಹೆಗ್ಡೆ

# ಬಂಟರ ಯಾನೆ ನಾಡವರ ಸಂಘ ಹೆಬ್ರಿ ಅಜೆಕಾರು ವಲಯದ ಸಮಾವೇಶ




ಬಂಟರ ಯಾನೆ ನಾಡವರ ಸಂಘ, ಹೆಬ್ರಿ – ಅಜೆಕಾರು ವಲಯದ ಸಮಾವೇಶ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಮಹಾಸಭೆ ದಿನಾಂಕ 04.03.2023ರಂದು ಹೆಬ್ರಿ ಬಂಟರ ಭವನದಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಗೌರವಾನ್ವಿತ ನ್ಯಾಯಮೂರ್ತಿ ಹಾಗೂ ನಿವೃತ್ತ ಕರ್ನಾಟಕ ಲೋಕಾಯುಕ್ತರಾದ ಜಸ್ಟೀಸ್ ಸಂತೋಷ್ ಹೆಗ್ಡೆಯವರು ಹಾಗೂ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಉಪಸ್ಥಿತರಿದ್ದರು. ಇದೇ ಸಮಯದಲ್ಲಿ ಬೆಂಗಳೂರು ಬಂಟರ ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಮಾತನಾಡಿ, ಬೆಂಗಳೂರು ಬಂಟರ ಸಂಘದಿಂದ ರೂ. 32,500/–ಗಳ ವಿದ್ಯಾರ್ಥಿ ವೇತನವನ್ನು ಹಸ್ತಾಂತರಿಸಿದರು. ಸಭೆಯ ಅಧ್ಯಕ್ಷತೆಯನ್ನು ಹೆಬ್ರಿ ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಉದಯ ಶೆಟ್ಟಿ ಮುನಿಯಾಲ್‌ರವರು ವಹಿಸಿದ್ದರು. ಸಂಚಾಲಕರಾದ ಶ್ರೀ ವಿಠಲ ಶೆಟ್ಟಿ ಹಾಗೂ ಇನ್ನಿತರ ಪದಾಧಿಕಾರಿಗಳು, ಸದಸ್ಯರು ಸಭೆಯಲ್ಲಿ ಭಾಗವಹಿದ್ದರು.

# ಹೃಷಿ ಕೇಶ ಇಲ್ಲಿಗೆ ಋಷಿಕೇಶವೆಂತಲೂ ಕರೆಯುತ್ತಾರೆ



ಅತ್ರಾಡಿ ಭೋಜರಾಜ ಹೆಗ್ಡೆ

ಭಾರತದ ಕೋಟಿ ಕೋಟಿ ಜನರ ಶ್ರದ್ಧಾ ಕೇಂದ್ರಗಳಾದ ಈ ಪರಮ ಪವಿತ್ರ ಪುಣ್ಯ ಕ್ಷೇತ್ರಗಳು ಸಹಸ್ರಾರು ವರುಷಗಳಿಂದಲೂ, ಆಸ್ತಿಕರ ಪ್ರಕೃತಿ ಪ್ರೇಮಿಗಳನ್ನು ತನ್ನತ್ತ ಸೆಳೆಯುತ್ತಲೇ ಇದೆ. ದಿನನಿತ್ಯದ ಜಂಜಾಟಗಳ ನಡುವೆ ಒಮ್ಮೆ ಬಿಡುವು ಮಾಡಿಕೊಂಡು ಇಂಥಾ ಪವಿತ್ರ ಕ್ಷೇತ್ರಗಳ ದರ್ಶನ ಮಾಡಿ ಬಂದರೆ ಅದು ಏಕತಾನತೆಯ ಜೀವನದಲ್ಲಿ ಸುಂದರ ನೆನಪುಗಳ ಬುತ್ತಿಯಾಗುವುದರಲ್ಲಿ ಸಂದೇಹವೇ ಇಲ್ಲ. ಹೃಷಿಕೇಶ ನಮ್ಮ ಈ ಪುಣ್ಯ ಭೂಮಿಯ ಮೇಲಿರುವ ಏಕೈಕ ಆಧ್ಯಾತ್ಮಿಕ, ಶ್ರದ್ಧಾಕೇಂದ್ರ. ಇದನ್ನು ಸ್ವರ್ಗ ಭೂಮಿ ಎನ್ನುವರು. ಭಾರತೀಯರು ಮಾತ್ರವಲ್ಲದೆ ವಿದೇಶಿಯರು ಕೂಡಾ ಮಹತ್ವ ನೀಡುವರು. ಹರಿದ್ವಾರದಿಂದ ಹೃಷಿಕೇಶಕ್ಕೆ ರೈಲಿನಿಂದ ಹೋದರೆ 25ಕಿ.ಮೀ. ಇದೆ. ಅರ್ಧ ಗಂಟೆ ಸಾಕು ಮತ್ತು ಹೃಷಿಕೇಶ ಕೊನೆಯ ರೈಲ್ವೇ ಸ್ಟೇಶನ್ ಮತ್ತು ಹಿಮಾಲಯ ಪರ್ವತ ಹತ್ತಲು ಇದೇ ಮಹಾದ್ವಾರ. ಇಲ್ಲಿಂದ ಮುಂದೆ ಬಸ್ಸು ಅಥವಾ ಕಾರುಗಳಲ್ಲೇ ಪ್ರಯಾಣ. ಹೃಷಿಕೇಶಕ್ಕೆ ವೇದಗಳ ಕಾಲದಿಂದಲೂ ಪುರಾಣಗಳಲ್ಲಿ ಮತ್ತು ಮುಕ್ತಿ ಧಾಮಗಳಲ್ಲಿ ಮೋಕ್ಷನಗರಿ ಎಂದೇ ವರ್ಣಿಸಲಾಗಿದೆ. ಭಗೀರಥನು ತನ್ನ ಪಿತೃಗಳಿಗೆ ಮೋಕ್ಷ ಸಿಗಲು ಶಿವನ ತಪಸ್ಸು ಮಾಡಿ ಗಂಗೆಯನ್ನು ಭೂಮಿಗೆ ತಂದ ಸ್ಥಳ. ಇದು ಸ್ವರ್ಗಕ್ಕೆ ಸಮಾನವೆನ್ನುತ್ತಾರೆ. ಇಲ್ಲಿಯ ಕೋಟಿತೀರ್ಥದಲ್ಲಿ ಪಿತೃಗಳಿಗೆ ತರ್ಪಣ ನೀಡಿದರೆ ಪುಂಡರೀಯ ಯಜ್ಞಫಲ ದೊರೆಯುವುದಲ್ಲದೆ ಅವನ ಕುಲದ ಉದ್ಧಾರವಾಗುವುದೆಂದು ಶಾಸ್ತ್ರ ಪುರಾಣಗಳು ಸಾರುತ್ತವೆ. ಗಂಗಾನದಿಯ ದಡಗಳಲ್ಲಿ ಅನೇಕ ಸಂತರು, ಋಷಿಮುನಿಗಳು, ಸಿದ್ಧ ಪುರುಷರು ತಪ ಸಾಧನೆ ಮಾಡುತ್ತಿರುತ್ತಾರೆ. ಇಲ್ಲೇ ಉಳಿದು ಸಾಧನೆ ಮಾಡ ಬಯಸುವವರಿಗೆ ಇಲ್ಲಿ ಕಾಲಿಕಂಬ್ಲಿವಾಲ ಎಂಬ ಧರ್ಮ ಸಂಸ್ಥೆ ಮತ್ತು ಶಿವಾನಂದ ಸ್ವಾಮಿ ಎಂಬ ಧರ್ಮ ಸಂಸ್ಥೆಯು ಅನೇಕ ಅನುಕೂಲಗಳನ್ನು ಮಾಡಿ ಕೊಡುತ್ತವೆ. ಅಲ್ಲದೇ ಇಲ್ಲಿ ಸಾಧನೆ ಮಾಡ ಬಯಸುವವರಿಗೆ ಅನೇಕ ಸಾಧನಾ ಗೃಹಗಳು, ಋಷ್ಯಾಶ್ರಮಗಳೂ ಇವೆ. ಅಧ್ಯಾತ್ಮ ಎಂಬುದು ಮಾನವನ ಮನಸ್ಸು ಸ್ಥಿರವಾಗಿ ನಿಲ್ಲಿಸುವ ಅಂತರಂಗದ ವಿಜ್ಞಾನವಾಗಿದೆ. ಅಧ್ಯಾತ್ಮಿಕದಲ್ಲಿ ಮಾತ್ರ ಮಾನವ ಲೋಕಕ್ಕೆ ಸೀಮಿತ ಆನಂದ ಲಭ್ಯ ಎಂದು ಕಂಡು ಕೊಂಡ ವೈಜ್ಞಾನಿಕ ಸತ್ಯವಾಗಿದೆ. ಇಲ್ಲಿ ಅಂಧ ಶ್ರದ್ಧೆಗೆ ಅವಕಾಶವಿಲ್ಲ. ಇಲ್ಲಿ ಬೆಳಿಗ್ಗೆ ಎದ್ದು ಹೊರಗಡೆ ನೋಡಿದರೆ ತಲೆ ಹಿಂದೆ ಒಂದು ಜುಟ್ಟು ಮೈಮೇಲೆ ಒಂದು ಬಿಳಿ ಬೈರಾಸಿನ ಕಚ್ಚೆ ಕಟ್ಟಿಕೊಂಡ ಋಷಿ ಕುಮಾರರಂತೆ ಓಡಾಡುವ ವಿದ್ಯಾರ್ಥಿಗಳು ಕಾಣ ಸಿಗುವರು. ಇಲ್ಲಿ ಸಾಧು ಸಂತರು ಅಲ್ಲಲ್ಲಿ ನಿರ್ಮಿಸಿಕೊಂಡ ಸಾಧನಾ ಗೃಹಗಳೂ, ದೇವಾಲಯಗಳೂ, ಹೂದೋಟಗಳೂ, ಇದನ್ನೆಲ್ಲಾ ನೋಡುವಾಗ ಎಂತಾ ನಾಸ್ತಿಕನಾದರೂ ಆಸ್ತಿಕನಾಗಿ ಬಿಡಬಹುದೆಂದು ಕಾಣಿತು ನನಗೆ. ನಮ್ಮ ದೇಶದಲ್ಲೇ ಇರುವ ಏಕೈಕ ವೇದಾಧ್ಯಯನ, ಶಾಸ್ತ್ರ ಪುರಾಣ, ಉಪನಿಷತ್ತು, ಸಂಸ್ಕೃತ ಯೋಗ ಅಧ್ಯಯನಕ್ಕಾಗಿ ಇರುವ ಏಕೈಕ ಕ್ಷೇತ್ರ ಹೃಷಿಕೇಶ. ಇಲ್ಲಿಗೆ ಭಾರತೀಯರು ಮಾತ್ರವಲ್ಲದೇ ವಿದೇಶಿಯರು ಕೂಡಾ ತುಂಬಾ ಮಂದಿ ವೇದಾಧ್ಯಯನಕ್ಕಾಗಿ ಬರುತ್ತಾರೆ. ತ್ರೇತಾಯುಗದಲ್ಲಿ ರಾಮ ಲಕ್ಷ್ಮಣರು ವೇದಾಧ್ಯಯನಕ್ಕಾಗಿ ಬಂದು ಇಲ್ಲೇ ಆಶ್ರಮದಲ್ಲಿದ್ದರಂತೆ. ಆಗ ಗಂಗಾನದಿ ದಾಟಲು ದೋಣಿಯಲ್ಲೇ ದಾಟಬೇಕಿತ್ತು. ಆಗ ಶ್ರೀರಾಮನು ತಮ್ಮ ಲಕ್ಷ್ಮಣನಲ್ಲಿ ಇಲ್ಲಿ ಗಂಗಾನದಿ ದಾಟಲು ನಿನ್ನ ಬಿಲ್ಲು ಬಾಣಗಳಿಂದಲೇ ಒಂದು ತೂಗು ಸೇತುವೆ ನಿರ್ಮಿಸು ಎನ್ನಲು, ಆಗ ಲಕ್ಷ್ಮಣನು ತನ್ನ ಬಿಲ್ಲು ಬಾಣಗಳಿಂದಲೇ ಒಂದು ಸುಂದರ ತೂಗು ಸೇತುವೆ ನಿರ್ಮಿಸಿದನಂತೆ. ಶ್ರೀರಾಮನು ಅದನ್ನು ಕಂಡು ಸಂತೋಷದಿಂದ ಅದನ್ನು ಲಕ್ಷ್ಮಣ ಜೂಲ ಎಂದು ಹೆಸರಿಟ್ಟನು. ಆಮೇಲೆ ದ್ವಾಪರ ಯುಗದಲ್ಲಿ ಶ್ರೀಕೃಷ್ಣ ಬಲರಾಮರು ಇಲ್ಲಿ ಬಂದು ಸಂದೀಪನಿ ಮುನಿಯ ಆಶ್ರಮದಲ್ಲಿ ಜ್ಞಾನಾರ್ಜನೆಗಾಗಿ ಇದ್ದರಂತೆ.

ಇಲ್ಲಿ ಭಾರತೀಯರು ಮಾತ್ರವಲ್ಲ ದೇಶ ವಿದೇಶದ ರಾಜ ಮಹಾರಾಜರ ಮಕ್ಕಳೂ ವೇದಾಧ್ಯಯನಕ್ಕಾಗಿ ಬರುತ್ತಿದ್ದರಂತೆ. ಹೃಷಿಕೇಶದ ಸುಂದರ ಸೊಬಗನ್ನು ನೋಡಲು ಎರಡು ಕಣ್ಣುಗಳೂ ಸಾಲದು. ಹಿಮಾಲಯ ಪರ್ವತದಿಂದ ಬೀಸುವ ತಂಗಾಳಿ ಕೈಲಾಸ ಪರ್ವತದಿಂದ ಹರಿದು ಬರುತ್ತಿರುವ ಅಮೃತ ಸಮಾನವಾದ ಗಂಗೆ ಇಲ್ಲಿಯ ಜನರ ಸದಾ ಆರೋಗ್ಯ ಭಾಗ್ಯವನ್ನು ಕಾಪಾಡುವ ಸುಂದರ ಸ್ವರ್ಗಕ್ಕೆ ಸಮಾನವಾದ ಕ್ಷೇತ್ರ ಹೃಷಿಕೇಶ. ನಮ್ಮ ಹಿಂದಿನ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ತಂದೆ ತುಂಬಾ ಬಡವರಂತೆ. ಅವರ ಸಂಪಾದನೆಯಲ್ಲಿ ಎರಡು ಹೊತ್ತು ಊಟಕ್ಕೂ ಸಾಲದಾಗಿತ್ತು. ಅಬ್ದುಲ್ ಕಲಾಂ ಸ್ಕೂಲಿಗೆ ಹೋಗುವಾಗ ತುಂಬಾ ಬುದ್ಧಿವಂತರಾಗಿದ್ದರಂತೆ. ಆದ್ದರಿಂದ ಅವರನ್ನು ಊರಿನವರೆಲ್ಲಾ ಸೇರಿ ಕಲಿಸಿ ಬಿ.ಇ. ಇಂಜಿನಿಯರಿಂಗ್ ಓದಿಸಿದರು. ಆಮೇಲೆ ಪೈಲೆಟ್ ಕೆಲಸಕ್ಕೆಂತ ಇಂಟರ್‌ವ್ಯೂಗೆ ಹೋಗಿ ಎಲ್ಲದರಲ್ಲೂ ಉತ್ತಮವಾಗಿ ಪಾಸಾಗಿ, ಹೈಟ್, ವೈಟ್ (ಎತ್ತರ, ತೂಕ) ಎರಡರಲ್ಲಿ ನಾಪಾಸಾದ್ದರಿಂದ ತುಂಬಾ ಬೇಸರಗೊಂಡು, ನಾನಿದ್ದು ಏನು ಪ್ರಯೋಜನವೆಂದು ಸನ್ಯಾಸಿ ಆಗಲು ಹೃಷಿಕೇಶಕ್ಕೆ ಹೊರಟು ಹೋದರಂತೆ. ಅಲ್ಲಿ ಒಬ್ಬ ಸಂತನ ಪರಿಚಯವಾಗಿ ಅವರಲ್ಲಿ ತನ್ನ ಕಷ್ಟಗಳನ್ನೆಲ್ಲಾ ಹೇಳಿಕೊಂಡು ಕಣ್ಣೀರು ಮಿಡಿದರಂತೆ. ಆಗ ಆ ಸಂತ ಇಷ್ಟರ ತನಕ ಆಗಿದೆಲ್ಲಾ ನಿನ್ನ ಒಳಿತಿಗೆ ಆಗಿದೆ. ಆದ್ದರಿಂದ ಏನೂ ಬೇಸರ ಮಾಡಿಕೊಳ್ಳಬೇಡ. ನಾಳೆ ಬೆಳಿಗ್ಗೆ ನೀನು ಬೆಂಗಳೂರಿಗೆ ಹೋಗಿ ಅಲ್ಲಿ ಎರೊನೊಟಿಕಲ್ಸ್‌ನಲ್ಲಿ ಒಂದು ಕೆಲಸ ಖಾಲಿ ಇದೆ. ನೀನು ಅಲ್ಲಿ ಹೋಗಿ ಕೆಲಸಕ್ಕೆ ಶುರು ಮಾಡು. ಆಮೇಲೆ ನೀನು ಹಿಂದಕ್ಕೆ ನೋಡುವ ಹಾಗಿಲ್ಲ. ಅಲ್ಲದೇ ನೀನು ಒಂದು ದಿನ ನಮ್ಮ ದೇಶಕ್ಕೆ ಪ್ರಥಮ ಪ್ರಜೆಯಾಗುವೆ ಎಂದು ಹರಸಿ ಕಳಿಸಿ ಕೊಟ್ಟರಂತೆ? ನಮ್ಮ ದೇಶದ ಪ್ರಧಾನಿ ಮೋದಿಯವರ ತಂದೆ ತುಂಬಾ ಬಡವರು. ಅವರು ಆ ಊರಿನ ರೈಲ್ವೇ ಸ್ಟೇಶನ್‌ನಲ್ಲಿ ಚಹಾ ಮಾರಿ ಬದುಕುತ್ತಿದ್ದರಂತೆ. ಮೋದಿಯವರು ರೈಲು ಬಂದಾಗ ರೈಲಿನೊಳಗೆ ಹೋಗಿ ಚಹಾ ಮಾರಿ ಬರುತ್ತಿದ್ದರಂತೆ. ಆದರೂ ಮನೆಯಲ್ಲಿ ಎರಡು ಹೊತ್ತು ಊಟಕ್ಕೂ ಗತಿ ಇಲ್ಲವಾಗುತ್ತಿತ್ತು. ಇನ್ನು ನಾನು ಇದ್ದು ಏನು ಪ್ರಯೋಜನ ಸನ್ಯಾಸಿ ಆಗುವುದೇ ಉತ್ತಮ ಎಂದು ಹೃಷಿಕೇಶಕ್ಕೆ ಹೊರಟು ಹೋದರಂತೆ. ಅಲ್ಲಿ ಅವರಿಗೆ ಒಬ್ಬ ಸಂತನ ಪರಿಚಯವಾಗಿ ಅವನಲ್ಲಿ ತನ್ನ ಕಷ್ಟಗಳನ್ನು ಹೇಳುತ್ತಾ ಕಣ್ಣೀರು ಹಾಕಿದರಂತೆ. ಆಗ ಆ ಸಂತ ಇವರ ಮುಖವನ್ನೇ ನೋಡುತ್ತಾ ಆದದ್ದೆಲ್ಲಾ ಮರೆತು ಬಿಡು. ನೀನು ನಾಳೆ ಬೆಳಿಗ್ಗೆ ಬಾ ಎಂದು ಹೇಳಿ, ನೀನಗೀಗ ಶುಭ ದಿನಗಳು ಪ್ರಾರಂಭವಾಗಿವೆ. ನೀನು ಊರಿಗೆ ಹೋಗಿ ನಿನ್ನ ಸಂಸಾರ ಮಾತ್ರವಲ್ಲ ನಿನ್ನ ಊರಿನವರಿಗೂ ಸಹಾಯ ಮಾಡುವ ಶಕ್ತಿ ಬರುತ್ತದೆ. ಅಲ್ಲದೇ ಒಂದು ದಿನ ನೀನು ಈ ದೇಶವನ್ನೇ ಆಳುವವನಾಗುವೆ ಎಂದು ಹೇಳಿ ಹರಸಿ ಕಳುಹಿಸಿಕೊಟ್ಟರಂತೆ. ಇಂದೂ ಸಹಾ ಮೋದಿಯವರು ವರುಷಕ್ಕೆ ಒಂದೆರಡು ಬಾರಿ ಹೃಷಿಕೇಶಕ್ಕೆ ಹೋಗಿ ತನ್ನ ಗುರುಗಳ ಪಾದ ಸೇವೆ ಮಾಡಿ ಅವರ ಆಶೀರ್ವಾದ ಪಡೆದು ಬರುತ್ತಾರಂತೆ. ಋಷಿ ಮುನಿಗಳು ಸಂತ ಶರಣರು, ಇರುವುದೇ ದೇಶದ ಮತ್ತು ಈ ಸೃಷ್ಟಿಯ ಜನರ ಕಲ್ಯಾಣಕ್ಕಾಗಿ ಮತ್ತು ಉದ್ಧಾರಕ್ಕಾಗಿ ಇರುವವರು ಎಂದರ್ಥ.

ಹಿಂದಿನ ಕಾಲದಲ್ಲಿ ಭಾರತೀಯರು ಮಾತ್ರವಲ್ಲದೇ ದೇಶ ವಿದೇಶದ ರಾಜ ಮಹಾರಾಜರು ಕೂಡಾ ತಮಗೆ ವಯಸ್ಸಾದ ಮೇಲೆ ಮಕ್ಕಳಿಗೆ ಪಟ್ಟಕಟ್ಟಿ ತಾವು ಹೃಷಿಕೇಶಕ್ಕೆ ಬಂದು, ಮಹಾ ಪ್ರಸ್ಥಾನವೃತ ಕೈಗೊಂಡು ತಮ್ಮ ಸಂಧ್ಯಾ ಸಮಯದಲ್ಲಿ ಶಿವಾಶ್ರಯವನ್ನೇ ಬಯಸಿ ಹೃದಯವಾಸಿ ಶಿವನಾಮ ಸ್ಮರಣೆಯೊಂದಿಗೆ ಅಲ್ಲೇ ಶಿವ ಪಾದ ಸೇರುತ್ತಿದ್ದರು.

# ಮೌನವೇ ಶಿಕ್ಷೆ, ಮಾತೇ ಬಿಡುಗಡೆ


ಡಾ.ಎನ್ ಜಯರಾಮ ಶೆಟ್ಟಿ

ಸಿ. ಎಸ್. ಲಿವಿಸ್ (1898–1963), ಇಂಗ್ಲೆಂಡ್ ದೇಶದ ಪ್ರತಿಭಾನ್ವಿತ ಬರಹಗಾರ, ಚಿಂತಕ ಮತ್ತು ಪ್ರತಿಷ್ಠಿತ ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದ ಮೂವತ್ತು ವರ್ಷ ಸೇವೆ ಸಲ್ಲಿಸಿದ್ದ ಇಂಗ್ಲಿಷ್ ಭಾಷೆಯ ಪ್ರಾಧ್ಯಾಪಕರಾಗಿದ್ದವರು. ಅವರ ವಿದ್ಯಾರ್ಥಿ ಜೀವನದಲ್ಲಿಯ ಒಂದು ಘಟನೆಯಿದು. ಅಂದಿನ ಕಾಲದಲ್ಲಿ ವಿಶ್ವವಿದ್ಯಾಲಯದ ಫೆಲೋಶಿಫ್ ಪಡೆಯುವುದೇ ಮಹಾಸಾಧನೆಯೆನ್ನುವಂತಿತ್ತು. ಸಿ. ಎಸ್. ಲಿವಿಸ್ ರವರು ಹಲವು ಸುತ್ತುಗಳ 'ಚಕ್ರವ್ಯೂಹ' ನಿಭಾಯಿಸಿ ಕೊನೆಯ ಸುತ್ತಿನ ಪ್ರಕ್ರಿಯೆಗೆ ಆಯ್ಕೆಯಾಗಿದ್ದರು. ಈ ಸುತ್ತಿನಲ್ಲಿ ಅಭ್ಯರ್ಥಿ ನಗರದ ಘಟಾನುಘಟಿ ಪ್ರಾಧ್ಯಾಪಕರುಗಳು ಮತ್ತು ಸಂಸ್ಥೆಯ ಮುಖ್ಯಸ್ಥರ ಕೂಡುವಿಕೆಯ ಔತಣಕೂಟದಲ್ಲಿ ಭಾಗವಹಿಸಿ, ಅಲ್ಲಿ ಆಯ್ಕೆದಾರರು ಕೇಳಬಹುದಾದ ಪ್ರಶ್ನೆಗಳನ್ನು ನಿಭಾಯಿಸಬೇಕು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಅಧೀನದ ಮಗ್‌ಡಾಲೆನ್ ಕಾಲೇಜಿನ ಅಧ್ಯಕ್ಷರಾಗಿದ್ದ ಸರ್ ಹರ್ಬರ್ಟ್ ವಾರನ್‌ರವರು ಲಿವಿಸ್‌ರವರ ಪಾಲಿಗೆ 'ಸಿಂಹಸ್ವಪ್ನ' ಆಗಿದ್ದರು. ಅವರನ್ನು ಎದುರಿಸುವುದು ಆ ದಿನದ ಸವಾಲಾಗಿತ್ತು. ಉಳಿದವರು ಚೆನ್ನಾಗಿ ಮದ್ಯ ಸೇವಿಸಬಹುದು, ಊಟ ಮಾಡಬಹುದು, ಆದರೆ, ವಾರನ್‌ರವರ ಪ್ರಶ್ನೆಗಳಿಂದ ಲಿವಿಸ್‌ಗೆ ಊಟ ಗಂಟಲಿಗೆ ಇಳಿಯದೇನೊ ಎನ್ನುವ ಪರಿಸ್ಥಿತಿ.

ಇನ್ನೂ ಕಷ್ಟಕರವಾದುದ್ದೇನೆಂದರೆ, ಹರ್ಬರ್ಟ್ ವಾರನ್, ಲಿವಿಸರ ಪಕ್ಕದಲ್ಲೇ ಕುಳಿತಿದ್ದುದು!. ಅಂದಿನ ಔತಣ ಐದು ಸುತ್ತಿನದ್ದು. ಅಂದರೆ ಅದೆಷ್ಟೋ ಸಮಯ ಕಳೆಯಬೇಕು ವಾರನ್‌ರವರ ಪಕ್ಕ ಕುಳಿತು! ಎರಡು ಸುತ್ತಿನ ಊಟದ ಸಮಯದಲ್ಲಿ ವಾರನ್‌ರಿಂದ ಯಾವುದೇ ಪ್ರಶ್ನೆ ಬರಲಿಲ್ಲವಂತೆ. ಲಿವಿಸ್‌ರವರು ಚಡಪಡಿಸುವ ಪರಿಸ್ಥಿತಿ. ಅಂತೂ, ಮೂರನೆಯ ಸುತ್ತಿನಲ್ಲಿ ವಾರನ್ ರವರ ಬಾಯಿಂದ ಮುತ್ತೊಂದು ಉದುರಿತಂತೆ, 'ಲಿವಿಸ್, ನೀನು ಪದ್ಯಗಳನ್ನು ಇಷ್ಟಪಡುತ್ತಿಯೇನು? ಇದಕ್ಕಾಗಿಯೇ ಕಾಯುತ್ತಿದ್ದ ಲಿವಿಸ್ ಎದ್ದು ಬಿದ್ದು ಉತ್ತರಿಸಿದರಂತೆ, 'ಹೌದು ಅಧ್ಯಕ್ಷರೆ, ಖಂಡಿತವಾಗಿಯು'. ಮಾತು ಅಲ್ಲಿಗೆ ಮುಗಿಯಬೇಕೆ?! ತದನಂತರದಲ್ಲಿ ವಾರನ್ ಅಥವಾ ಬೇರೆ ಯಾವ ಸಂದರ್ಶಕರಿಂದ ಯಾವುದೇ ಪ್ರತಿಕ್ರಿಯೆ ಅಥವಾ ಪ್ರಶ್ನೆ ಇರದಿದ್ದದ್ದು ಲಿವಿಸ್‌ರವರ ಆತಂಕ ಹೆಚ್ಚಿತಂತೆ.

ಇನ್ನೇನು ಔತಣಕೂಟ ಮುಗಿಯುವ ಹಂತಕ್ಕೆ ಬರುತ್ತಿದೆಯೆನ್ನುವಾಗ, ಲಿವಿಸ್‌ರವರೆ ಧೈರ್ಯ ತಂದುಕೊಂಡು ಮೌನವನ್ನು ಮುರಿದರಂತೆ. ಅವರು ಹೇಳಿದ್ದೇನು ಗೊತ್ತೆ? 'ಮಾನ್ಯ ಅಧ್ಯಕ್ಷರೆ, ನಾನು ಗದ್ಯವನ್ನೂ ಇಷ್ಟ ಪಡುತ್ತೇನೆ'!

ಪ್ರಿಯ ಓದುಗರೆ ಗಮನಿಸಿ, ಇಲ್ಲಿ ಫೆಲೋಶಿಫ್ ಅಭ್ಯರ್ಥಿ ಬಯಸಿದ್ದು, ಬೇಡಿಕೊಂಡಿದ್ದು ಏನನ್ನು! 'ದಯವಿಟ್ಟು ಇನ್ನೇನಾದರೂ ಕೇಳಿ, ಮತ್ತೇನಾದರೂ ಮಾತನಾಡಿ. ಈ ದಿವ್ಯ ಮೌನದಲ್ಲಿ ನನ್ನನ್ನು ಹಿಂಸಿಸಬೇಡಿ'. ನಮ್ಮ ಸಂವಹನದಲ್ಲಿ ಇತರರನ್ನು 'ಸೇರಿಸಿಕೊಳ್ಳುವ' ಪ್ರಕ್ರಿಯೆ ಮುಖ್ಯವಾದುದು. ದೀರ್ಘ ಮೌನವನ್ನು ಇದಿರಿಸುವ, ಮಧ್ಯೆ ಮುರಿಯುವ ತೀರ್ಮಾನ ಸುಲಭವಾದುದಲ್ಲ. ಎತ್ತರದ ಸ್ಥಾನದಲ್ಲಿರುವವರು ತಮ್ಮ ಮಾತಿನ ಮೂಲಕ ಇತರರನ್ನು ಹರ್ಷಕ್ಕೆ ಒಳಪಡಿಸಬೇಕು, ಹಿಂಸೆಗಲ್ಲ. ಲಿವಿಸ್‌ರವರ ಸಂದರ್ಭಾನುಸಾರ ನಡವಳಿಕೆ ಮತ್ತು ಪ್ರತಿಕ್ರಿಯೆಯನ್ನು ಗಮನಿಸುವ ಸಲುವಾಗಿಯೇ ಸರ್ ಹರ್ಬರ್ಟ್ ವಾರನ್ ಆ ಕಾರಣಕ್ಕಾಗಿಯೇ ಮೌನದ ತಂತ್ರವನ್ನು ಬಳಸಿರಬಹುದೆ? ಗೊತ್ತಿಲ್ಲ. ಎದುರಿನ ವ್ಯಕ್ತಿಯನ್ನು ಗೊಂದಲಕ್ಕೆ ಮತ್ತು ಅನಿಶ್ಚತತೆಗೆ ಒಡ್ಡುವುದು ಸುತಾರಾಂ ಸರಿಯಲ್ಲ. ನಮ್ಮ ಮಾತುಗಳಿಗಿಂತ ಮೌನ ಇತರರಿಗೆ ಹೆಚ್ಚು ಆತಂಕವಾಗುವುದಿದ್ದರೆ, ಅಂತಹ ಅಸಹ್ಯ (ಸಹಿಸಲಾರದ) ಮೌನವನ್ನು ಮುರಿಯುವುದೇ ಒಳ್ಳೆಯದು. 'ನಾನು ಗದ್ಯವನ್ನೂ ಇಷ್ಟಪಡುತ್ತೇನೆ' ಅನ್ನುವ ಮಾತು ಲಿವಿಸ್ ರವರನ್ನು ಗೆಲ್ಲಿಸಿತು. ನಮ್ಮ ಸಂವಹನ ಪ್ರಕಟಣೆ ಮತ್ತು ಅರ್ಥೈಸುವಿಕೆಯಲ್ಲಿ ಎಷ್ಟೊಂದು 'ಒಳಸುಳಿ' ಗಳಿವೆಯೆಂಬುದನ್ನು ಗಮನಿಸಿ.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಬಂಟ್ಸ್ ಸೇವಾದಳ

## "ವಿದ್ಯಾಸಿರಿ ಯೋಜನೆ"

ನಮ್ಮ ಸಂಘದ "ಬಂಟ್ಸ್ ಸೇವಾದಳ"ದ ವತಿಯಿಂದ 'ವಿದ್ಯಾಸಿರಿ ಯೋಜನೆ' ಅಡಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಲು, 2023-24ನೇ ಸಾಲಿಗೆ ಶಾಲಾ ನೋಟ್ ಪುಸ್ತಕ ಹಾಗೂ ಕಲಿಕಾ ಸಾಮಾಗ್ರಿಗಳನ್ನು ನೀಡಲು ನಿರ್ಧರಿಸಲಾಗಿದೆ.

ಪ್ರಸ್ತುತ ಬೆಂಗಳೂರು ನಗರದಲ್ಲಿ ವಾಸಿಸುತ್ತಿದ್ದು, ನರ್ಸರಿಯಿಂದ 10ನೇ ತರಗತಿಯವರೆಗೆ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳು ಈ ಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಸೂಚನೆ : ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಮೊಬೈಲ್ ನಂಬರಿಗೆ ಕರೆಮಾಡಬಹುದಾಗಿದೆ.

**ಮೊ. : 9741220559**

ಸಂಘದ ಕಛೇರಿ : 7022119739 / 080-23399635-636

ಆನಂದರಾಮ ಶೆಟ್ಟಿ ಬಿ.
ಗೌರವ ಕಾರ್ಯದರ್ಶಿ

ಎಂ. ಮುರಳೀಧರ ಹೆಗ್ಡೆ
ಅಧ್ಯಕ್ಷರು

ಸತೀಶ್ ಶೆಟ್ಟಿ
ಸಂಚಾಲಕರು, ಬಂಟ್ಸ್ ಸೇವಾದಳ

ಉಮೇಶ್ ಕುಮಾರ್ ಶೆಟ್ಟಿ
ಚೇರ್‌ಪರ್ಸನ್, ಬಂಟ್ಸ್ ಸೇವಾದಳ

**BUNTS'SANGHA BANGALORE**
**No. 324, Chord Road, Vijayanagar, Bangalore – 560 040**
Tel: 080-23399323/ 23399635/ 23399636

Parent / Guardian Applicant

# Bunts' Sevadal
# ಬಂಟ್ಸ್ ಸೇವಾದಳ

**Application for availing Note book & Stationery items under 'Vidyasiri'Scheme**
**'ವಿದ್ಯಾಸಿರಿ' ಯೋಜನೆಯಡಿಯಲ್ಲಿ ನೋಟ್ ಪುಸ್ತಕ ಹಾಗೂ ಕಲಿಕಾ ಸಾಮಗ್ರಿಗಳು**

To,
The Hon. Secretary
Bunts' Sangha Bangalore

**Sir/ ಮಾನ್ಯರೇ,**
I/we request you to consider my application under "Vidyasiri" Scheme / ವಿದ್ಯಾಸಿರಿ ಯೋಜನೆಗೆ ನನ್ನ ಅರ್ಜಿಯನ್ನು ಪರಿಗಣಿಸಲು ಮನವಿ.

| | | | |
|---|---|---|---|
| Name of the Applicant : ಅಭ್ಯರ್ಥಿಯ ಹೆಸರು | | | |
| Father's Name : ತಂದೆಯ ಹೆಸರು | | | |
| Mother's Name : ತಾಯಿಯ ಹೆಸರು | | | |
| Address & Mob./Tel. No/ ವಿಳಾಸ ಮತ್ತು ಮೊ./ದೂರವಾಣಿ ಸಂಖ್ಯೆ : | | | |
| Family particulars / ಕುಟುಂಬ ಸದಸ್ಯರ ವಿವರ | Occupation / ಉದ್ಯೋಗ | Annual Income/ ವಾರ್ಷಿಕ ಆದಾಯ | Education / ವಿದ್ಯಾರ್ಹತೆ |
| Father / ತಂದೆ | | | |
| Mother / ತಾಯಿ | | | |

Details of the Applicant / ಅಭ್ಯರ್ಥಿಯ ವಿದ್ಯಾರ್ಹತೆಯ ಹಿನ್ನೆಲೆ

| Class (presently Studying) | Academic Year/ ಶೈಕ್ಷಣಿಕ ವರ್ಷ | State/ CBSC/ ICSE | Name & address of the Institution/ ಶಿಕ್ಷಣ ಸಂಸ್ಥೆಯ ಹೆಸರು ಮತ್ತು ವಿಳಾಸ |
|---|---|---|---|
| | | | |

<table>
<tr><td colspan="2">Two references of members of Bunts' Sangha Bangalore with full address and telephone number/ ಬೆಂಗಳೂರು ಬಂಟರ ಸಂಘದ ಎರಡು ಸದಸ್ಯರುಗಳ ಶಿಫಾರಸ್ಸು.<br>The applicant is known to me and I hereby declare that, the particulars furnished by them above are true and correct/ ಈ ಅಭ್ಯರ್ಥಿಯ ಬಗ್ಗೆ ನನಗೆ ತಿಳಿದಿದ್ದು, ಇವರು ಸಲ್ಲಿಸಿದ ವಿವರಗಳು ಸತ್ಯತೆಯಿಂದ ಕೂಡಿದೆ.</td></tr>
<tr><td>1. Name / ಹೆಸರು<br>Address / ವಿಳಾಸ<br><br>Tel. /Mob. No/ ದೂರವಾಣಿ/ಮೊಬೈಲ್ ಸಂಖ್ಯೆ:<br><br>Signature/ ಸಹಿ</td><td>2. Name / ಹೆಸರು<br>Address / ವಿಳಾಸ<br><br>Tel./Mob.No/ ದೂರವಾಣಿ/ಮೊಬೈಲ್ ಸಂಖ್ಯೆ:<br><br>Signature/ ಸಹಿ</td></tr>
</table>

## DECLARATION

The particulars furnished above are true & correct. **ನಾವು ನೀಡಿದ ವಿವರಗಳು ಸತ್ಯ ಮತ್ತು ಸರಿಯಾಗಿವೆ.**

| | |
|---|---|
| ***Signature of Applicant*** | ***Signature of Parent/Guardian*** |
| ಅಭ್ಯರ್ಥಿಯ ಸಹಿ | ಹೆತ್ತವರ/ ಪೋಷಕರ ಸಹಿ |

**Student has to furnish the following documents along with the application / ಅಭ್ಯರ್ಥಿಯು ಈ ಕೆಳಗಿನ ದಾಖಲೆಗಳನ್ನು ಅರ್ಜಿಯೊಂದಿಗೆ ಸಲ್ಲಿಸುವುದು.**

1. Certified copy of Ration Card / APL /BPL / Anthyodhaya Card / ಧೃಢೀಕೃತ / ರೇಷನ್ ಕಾರ್ಡ / ಬಿ.ಪಿ.ಎಲ್/ ಎ.ಪಿ.ಎಲ್ ಅಂತ್ಯೋದಯ ಕಾರ್ಡ್‌ನ ಪ್ರತಿ.
2. Study Certificate / ವ್ಯಾಸಂಗ ಪ್ರಮಾಣ ಪತ್ರ.
3. Aadhar Card copy / ಆಧಾರ್‌ಕಾರ್ಡ್ ಪ್ರತಿ
4. Certified copy of the marks card of the last examination/ ಹಿಂದಿನ ಪರೀಕ್ಷೆಯ ಧೃಢೀಕೃತ ಅಂಕಪಟ್ಟಿಯ ಪ್ರತಿ

## FOR OFFICE USE

Date:

**Chairperson,**
Bunts' Sevadal

# ॥ ಯಕ್ಷ ಬಂಡಿಗೆ ಬಂಟರ ಕೊಂಡಿ ॥

# ಉದಯೋನ್ಮುಖ ಪುರುಷವೇಷಧಾರಿ ಆಜ್ರಿ ಉದಯ ಕುಮಾರ್ ಶೆಟ್ಟಿ



ಹೆಚ್.ಶ್ರೀಧರ ಹೆಗ್ಡೆ

ಯಕ್ಷಗಾನಕ್ಕೆ ಬಂಟರ ಕೊಡುಗೆ ಅಪಾರ – ಅಮೂಲ್ಯ, ಅನೇಕ ರೀತಿಗಳಲ್ಲಿ ಅತ್ಯಧಿಕವೂ ಅವಿಸ್ಮರಣೀಯವೂ ಎಂದರೆ ಹೆಗ್ಗಳಿಕೆಯಾಗದು. ಹಳೆ ತಲೆಮಾರಿನ ಅಂಬೋಣದಂತೆ ವಿಶೇಷವಾಗಿ ಗಾಣಿಗ ಸಮುದಾಯ ಮತ್ತು ಬ್ರಾಹ್ಮಣರಿಗೆ ಯಕ್ಷ ಕಲೆ ರಕ್ತಗತವಾಗಿದ್ದು ಹಾರಾಡಿ, ಮಟ್ಪಾಡಿ ಶೈಲಿಗಳೆಂದೇ ಖ್ಯಾತಿ ಪಡೆದು ಯಕ್ಷ ಮಾತೆ ಒಲಿದಿದ್ದಾಳೆಂದರೆ ತಪ್ಪಾಗುತ್ತಿರಲಿಲ್ಲ. ಊರಿನ ಯಜಮಾನರಾಗಿ, ದೇವಸ್ಥಾನಗಳ ಮೊಕ್ತೇಸರರಾಗಿ, ಗ್ರಾಮದ ನ್ಯಾಯಾಧೀಶರಾಗಿ, ಭೂಮಾಲೀಕರಾಗಿ, ವಿಶೇಷವಾಗಿ ಯಕ್ಷಗಾನ ಮೇಳಗಳನ್ನು ಮುನ್ನಡೆಸುತ್ತಿರುವವರು ಒಂದು ಕಾಲದಲ್ಲಿ ಹೆಚ್ಚಾಗಿ ಬಂಟರೇ ಆಗಿದ್ದರೂ ಕೂಡಾ ಇತ್ತೀಚೆಗೆ ಯಕ್ಷ ಕಲಾವಿದರಾಗಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗುತ್ತಿರುವುದು ಹೆಮ್ಮೆಯ ಸಂಗತಿ. ಅಂತಹ ಬಂಟರನೇಕ ಯಕ್ಷಗಾನ ಕಲಾವಿದರಲ್ಲಿ ಹಂತ ಹಂತವಾಗಿ ಬಾನೆತ್ತರಕ್ಕೆ ಯಕ್ಷ ಕ್ಷೇತ್ರದಲ್ಲಿ ಬೆಳೆದು ತನ್ನದೇ ಆದ ಛಾಪನ್ನು ಮೂಡಿಸಿದ ಉದಯೋನ್ಮುಖ ಪುರುಷವೇಷಧಾರಿ ಆಜ್ರಿ ಉದಯಕುಮಾರ ಶೆಟ್ಟಿಯವರ ಕುರಿತು ವಿವರಿಸಲು ಹರ್ಷವಾಗುತ್ತಿದೆ.

ಆಜ್ರಿಯೆಂದಾಗ ತಕ್ಷಣ ನೆನಪಿಗೆ ಬರುವುದು ಯಕ್ಷಗಾನ, ಅದರಲ್ಲೂ ಈ ಕ್ಷೇತ್ರದಲ್ಲಿ ಖ್ಯಾತಿವೆತ್ತ ಮೇರು ಕಲಾವಿದ ಮಂದಾರ್ತಿ ಮೇಳದಲ್ಲಿ ಹಲವು ದಶಕಗಳಿಂದ ಸುದೀರ್ಘ ಸೇವೆ ಸಲ್ಲಿಸುತ್ತಿರುವ ಪ್ರಧಾನ (ಎರಡನೇ) ವೇಷಧಾರಿ ಗೋಪಾಲ ಗಾಣಿಗರು, ಇನ್ನೊಬ್ಬ ಇದೇ ಮೇಳದ ಪುರುಷವೇಷಧಾರಿ ಆಜ್ರಿ ಅರುಣ ಕುಮಾರ್ ಶೆಟ್ಟಿ.



ಈ ಲೇಖನದಲ್ಲಿ ಕುಂದಾಪುರ ತಾಲ್ಲೂಕಿನ ಆಜ್ರಿ ಗ್ರಾಮದ ಮೇಲ್ ಬೆಳ್ವಾಣ ಕೆಳಾಮನೆಯಲ್ಲಿ ಶ್ರೀಮತಿ ಪಾರ್ವತಿ ಮತ್ತು ಶ್ರೀಯುತ ರಘುರಾಮ ಶೆಟ್ಟಿಯವರ ಪುತ್ರ 1974ರಲ್ಲಿ ಜನಿಸಿದ ಶ್ರೀ ಉದಯ ಕುಮಾರ ಶೆಟ್ಟಿಯವರ ಯಕ್ಷಲೋಕ ವಿಜಯದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುವ ಪ್ರಯತ್ನ. ಆಜ್ರಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೇವಲ ಐದನೇ ತರಗತಿ ತನಕ ವ್ಯಾಸಂಗ. ಓದಿಗಿಂತ ಕಲೆಯ ಜೊತೆಗಿನ ಜೀವನವೇ ಅತಿ ಪ್ರಿಯವೆನಿಸಿದ ಉದಯರಿಗೆ ತನ್ನ ಹತ್ತನೇ ವಯಸ್ಸಿನಲ್ಲಿ ಮೇಳದ ತಿರುಗಾಟ ಪ್ರಾರಂಭ. ಈ ನಿಟ್ಟಿನಲ್ಲಿ ಆರಂಭದ ಹೆಜ್ಜೆ ಹಾಕಲು ತೊಡಗಿದ ಮೊದಲ ದಿನಗಳಲ್ಲಿ ಮಾವ ಆಜ್ರಿ ವಿಠಲ ಶೆಟ್ಟಿಯವರೇ ಪ್ರಥಮ ಗುರುವಾಗಿದ್ದರು.

1984ರಲ್ಲಿ ಪ್ರಪ್ರಥಮ ಗೆಜ್ಜೆ ಕಟ್ಟಿದ್ದು ಶ್ರೀ ಕ್ಷೇತ್ರ ಕಮಲಶಿಲೆ ಮೇಳದಲ್ಲಿ ಕೋಡಂಗಿ, ಬಾಲ ಗೋಪಾಲ (ಕಟ್ಟು ವೇಷ) ಒಡ್ಡೋಲಗದ ಪಡೆಯಲ್ಲಿ ಆಸಕ್ತಿಯಿಂದ ಪಾಲ್ಗೊಂಡಿದ್ದು, ಆಗಿನ ಕಮಲಶಿಲೆ ಮೇಳದ ಕಲಾವಿದರಾದ ಶ್ರೀ ಮಂದರ್ತಿ ರಘು ಮಡಿವಾಳ, ದಿ॥ ಸಾಧು ಕೊಠಾರಿ, ದಿ॥ ಚಿತ್ತೂರು ನಾರಾಯಣರವರ ಸಹವಾಸ. ಸಂಜೀವ ಶೆಟ್ಟಿಯವರ ಯಜಮಾನಿಕೆಯಲ್ಲಿ ಊರಿಂದೂರಿಗೆ ಹರಕೆಯಾಟಕ್ಕಾಗಿ ಎತ್ತಿನ ಗಾಡಿಯ ಪಯಣ. ವಾರಕ್ಕೆ ಕೇವಲ ಒಂದು ರೂಪಾಯಿ ಆರಂಭಿಕ ಸಂಬಳದೊಂದಿಗೆ ಸುಮಾರು ಒಂದು ದಶಕದ ಸೇವೆಯ ಪ್ರಯಾಣ. ಅಲ್ಲಿಂದ ಶ್ರೀ ಎಂ.ಎಂ. ಹೆಗ್ಡೆಯವರ ಶಿಸ್ತಿನ ಯಜಮಾನಿಕೆಯ ಮಾರಣಕಟ್ಟೆ ಮೇಳದಲ್ಲಿ ಪೀಠದಾಸ್ತ್ರೀ ಪಾತ್ರಧಾರಿಯಾಗಿ ಮೂರನೇ ವೇಷಧಾರಿಯಾಗಿ, ಅಗ್ರಮಾನ್ಯ ಕಲಾವಿದರಾದ ಶ್ರೀಐರ್‌ಬೈಲ್ ಆನಂದ ಶೆಟ್ಟಿ, ದಿ॥ ನೀಲಾವರ ಮಹಾಬಲ ಶೆಟ್ಟಿ, ದಿ॥ ಹಳ್ಳಾಡಿ ಕುಷ್ಠ, ಆಲೂರು ಸುರೇಂದ್ರ, ದಿ॥ ಅನಂತ ಕುಲಾಲರೊಂದಿಗೆ ಅನುಭವದ ಅವಿಸ್ಮರಣೀಯ ಕ್ಷಣಗಳು, ತದನಂತರ ರಾಷ್ಟ್ರ ಪ್ರಶಸ್ತಿ ವಿಜೇತ ದಿ॥ ಚಿಟ್ಟಾಣಿ ರಾಮಚಂದ್ರ ಹೆಗ್ಡೆ, ದಿ॥ ಕೆರೆಮನೆ ಮಹಾಬಲ ಹೆಗ್ಡೆ, ದಿ॥ ಕೋಟ ವೈಕುಂಠರಂತಹ ಮಹಾನ್ ಕಲಾವಿದರೊಡನೆ ಬಚ್ಚಗಾರು ಮೇಳದಲ್ಲಿ ಪಳಗಿ, ಅನುಭವಿಸಿದ ಅನುಭವ, ಅಭ್ಯುದಯ, ಕಲಾ ನೈಪುಣ್ಯತೆ, ಸಾಧನೆಯ ಫಲದೊಂದಿಗೆ ಅಲ್ಲಿಂದ ಮಂದಾರ್ತಿ ಮೇಳಕ್ಕೆ ಪಾದಾರ್ಪಣೆ.

ಪ್ರಸ್ತುತ ಮಂದಾರ್ತಿ ಮೇಳದಲ್ಲಿ 25 ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸುತ್ತಿರುವ ಶೆಟ್ಟರು, 5 ಮೇಳಗಳಲ್ಲಿನ ಒಂದು ಮೇಳದ ಸಮರ್ಥ ಪುರುಷ ವೇಷಧಾರಿಯಾಗಿ ಕಥಾನಾಯಕ ಹಾಗೂ ಖಳ ನಾಯಕನ ಪಾತ್ರವನ್ನು ನಿರ್ವಹಿಸಿ ಯಕ್ಷ ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಾರೆ. ಮಂದಾರ್ತಿ ಮೇಳದಲ್ಲಿನ ಅಗ್ರ ಪಂಕ್ತಿಯ ಕಲಾವಿದರಾದ ಶ್ರಿ ಕೆ.ಪಿ. ಹೆಗ್ಡೆ, ಹೆರಂಜಾಲು ಗೋಪಾಲ ಗಾಣಿಗ, ಸುಬ್ರಹ್ಮಣ್ಯ ಚಿಟ್ಟಾಣಿ, ಕಣ್ಣಿಮನೆ, ಥಂಡಿಮನೆಯಂಥವರ ಒಡನಾಟದಿಂದ ಅರ್ಜುನ, ದುಶ್ಯಾಸನ, ರಾವಣ, ಕಂಸ, ಕೀಚಕ, ಕೃಷ್ಣ, ಸುಧನ್ವ, ವಿಷ್ಣು, ರುದ್ರಕೋಪ, ಚಂದ್ರಹಾಸ, ಶ್ವೇತಕುಮಾರ, ಬರ್ಬರಿಕ, ಕೌರವ, ಋತುಪರ್ಣ, ದೇವವರ್ಮ, ಮಹಿಷಾಸುರ ಮೊದಲಾದ ಪ್ರಮುಖ ಪಾತ್ರಗಳು ಕೀರ್ತಿ ತರುವುದರೊಂದಿಗೆ ತನ್ನ ಬದುಕನ್ನೇ ಬದಲಾಯಿಸಿದ್ದು ಶ್ರೀ ದುರ್ಗಾಪರಮೇಶ್ವರೀ ತಾಯಿಯೆಂದು ಭಾವುಕತೆಯ ಒಡಲಾಳದ ಮಾತನ್ನು ಹೇಳುತ್ತಾರೆ.

ಯಕ್ಷಗಾನಕ್ಕೆ ತಾನೇನು ನೀಡದಿದ್ದರೂ ಯಕ್ಷಗಾನ ತನಗೆ ಬಹಳಷ್ಟು ಕೊಟ್ಟಿದೆ, ವಿಶೇಷವಾಗಿ ನೆಮ್ಮದಿಯ ಸಂತೃಪ್ತಿ ಜೀವನ, ಅಸಂಖ್ಯಾತ ಯಕ್ಷ ಅಭಿಮಾನಿಗಳು/ ಪ್ರೇಕ್ಷಕರು ತನ್ನನ್ನು ಗುರುತಿಸಿ, ಬಡವನಾದರೂ ಕಲೆಗೆ ಬಡತನವಿಲ್ಲವೆನ್ನುವ ಆಜ್ರಿ ಉದಯ ಕುಮಾರ್ ಶೆಟ್ಟರ ಉದ್ವೇಗದ, ಸಂತೋಷದ, ದಿಟ್ಟತನದ ಮಾತು ನಿಜಕ್ಕೂ ಪ್ರಶಂಸಾರ್ಹ. ಪತ್ನಿ ಜ್ಯೋತಿ, ಗಿರಿಜೆ ರಮೆ ವಾಣಿಯರಂತಹ ಪ್ರೀತಿ, ಸ್ವಾತಿ, ಶೃತಿ ನಾಮಾಂಕಿತದ ಮೂವರು ಹೆಣ್ಣು ಮಕ್ಕಳೊಂದಿಗಿನ ಅಮವಾಸೆಬೈಲಿನಲ್ಲಿನ ವಾಸ್ತವ್ಯದ ನೆಮ್ಮದಿಯ ಸಾಂಸಾರಿಕ ಜೀವನ ನಡೆಸುತ್ತಿದ್ದಾರೆ. ಇಂಥ ಉದಯೋನ್ಮುಖ ಪ್ರತಿಭಾನ್ವಿತ ಮೇರು ಕಲಾವಿದನನ್ನು ಕಲಾ ಸಂಘ, ಸಂಸ್ಥೆಗಳು ಗುರುತಿಸಿ ಗೌರವಿಸಲೆಂದು ಆರಾಧ್ಯ ದೇವಿ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ತಾಯಿ ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯ ನೀಡಲೆಂದು ಪ್ರಾರ್ಥಿಸುತ್ತೇನೆ.

# ಬಂಟರ ಸಂಘ ಬೆಂಗಳೂರು

## ಸದಸ್ಯ ಬಾಂಧವರ ಗಮನಕ್ಕೆ

ಸಂಘದ ವಿವಾಹ ವೇದಿಕೆ ಸಮಿತಿಯ ವತಿಯಿಂದ ಸಂಘದಲ್ಲಿ ನೋಂದಾಯಿಸಲ್ಪಟ್ಟ ಆಸಕ್ತ ವಧೂ–ವರರ ಮಾಹಿತಿಯನ್ನು ಒದಗಿಸುವ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಅರ್ಜಿಗಳು ಸಂಘದ ಕಛೇರಿಯಲ್ಲಿ ಲಭ್ಯವಿದ್ದು, ಆಸಕ್ತ ವಧೂ–ವರರು ಅರ್ಜಿಗಳನ್ನು ಭರ್ತಿ ಮಾಡಿ ಸಂಘಕ್ಕೆ ಸಲ್ಲಿಸಬಹುದಾಗಿದೆ. ಈ ಸೌಲಭ್ಯವು ಸಂಪೂರ್ಣ ಉಚಿತವಾಗಿದ್ದು, ಯಾವುದೇ ನೋಂದಣಿ ಶುಲ್ಕ ಇರುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಅನಧಿಕೃತವಾಗಿ ಸಂಘದ ಹೆಸರನ್ನು ಬಳಸಿ ವಾಟ್ಸಾಪ್ ಗ್ರೂಪ್ ಹಾಗೂ ಇತರ ಮಾಧ್ಯಮಗಳ ಮೂಲಕ ಮಧೂ–ವರರ ಮಾಹಿತಿ ಸೌಲಭ್ಯಕ್ಕೆ ಶುಲ್ಕ ಪಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ.

ಆದ್ದರಿಂದ, ಸಂಘದ ವಿವಾಹ ವೇದಿಕೆಯ ಹೆಸರಿನಲ್ಲಿ ಯಾರಾದರೂ ಶುಲ್ಕದ ಬೇಡಿಕೆ ಇಟ್ಟಲ್ಲಿ ಅಥವಾ ಸಂಘದ ಹೆಸರನ್ನು ಬಳಸಿದಲ್ಲಿ, ಈ ಬಗ್ಗೆ ತಕ್ಷಣ ಮಾಹಿತಿ ನೀಡಬೇಕಾಗಿ ವಿನಂತಿಸಲಾಗಿದೆ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಸುರೇಂದ್ರ ಶೆಟ್ಟಿ ಎ.**
ಸಂಚಾಲಕರು, ವಿವಾಹ ವೇದಿಕೆ ಸಮಿತಿ
97419 10925

**ಶೋಭ ಶೇಕ**
ಚೇರ್‌ಪರ್ಸನ್, ವಿವಾಹ ವೇದಿಕೆ ಸಮಿತಿ
99018 85998



## ಅಭಿನಂದನೆಗಳು

ಕೋರಮಂಗಲದ ರಿಸರರ್ವಾಯರ್ ಪಬ್ ಮಾಲೀಕರಾದ ಶ್ರೀ ಕೇಶವ ಶೆಟ್ಟಿಯವರ ಪುತ್ರ **ಶ್ರೀ ಪ್ರತೀಕ್ ಶೆಟ್ಟಿ**ಯವರು ಸೌತ್ ಆಫ್ರಿಕಾದಲ್ಲಿ ನಡೆದ ಬನ್‌ಜೀ ಜಂಪ್‌ನಲ್ಲಿ ಗಿನ್ನೆಸ್ ವರ್ಲ್ಡ್ ರೆಕಾರ್ಡ್ ಮಾಡಿದ್ದಾರೆ. ಇವರ ಸಾಧನೆಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.



## ಅಭಿನಂದನೆಗಳು

ಬೆಂಗಳೂರು ಬಂಟರ ಸಂಘದ ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರಾದ **ಶ್ರೀ ಕೆ. ನಾಗರಾಜ ಶೆಟ್ಟಿ**ಯವರು ಕನ್ನಡ ಕರಾವಳಿ ವೇದಿಕೆ (ರಿ.) ಬೆಂಗಳೂರು ಇದರ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಇವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.



## Congratulations

**Ms. Saanvi Sharan Shetty,** D/o Dr. Sharan Kumar Shetty and Mrs. Swathi Sharan Shetty, studying in Cambridge School, Mangalore has secured first place (Gold) in the National Kungfu Tournament held at Bangalore by Tamilnadu Sports Association. Bunts Sangha Bangalore congratulates and wishes her all the best.




## From 26th Sept. to 30th Sept. 2023

**HIGHLIGHTS :** ***Varanasi - Kashi Vishwanath Temple, Holy Ganga Ghats Banaras, Hindu University Sarnath, Kala Bhairav Temple. Prayagraj - Triveni Sangam, Sita Madi. Ayodhaya - Ram Mandir, Tulasi Smarak, Nageshwarnath Temple, Kanak Bhavan.***

**PACKAGE COST INR 36500/- PER PERSON - ALL INCLUSIVE - EX-MUMBAI**

**Cost Includes :** To & Fro Airfare from Mumbai (BOM-VNS/ LKO-BOM). Accommodation: 2Nt Varanasi, 1Nt Prayagraj, 1Nt Ayodhya with all meals. All transfers & sightseeing by AC Coach. Group accompanied by experienced Tour Manager. Cost excludes: All expenses of personal nature.

For any further details please contact:

IATA Approved

Canara Tours & Travels Pvt. Ltd
....... GOOD PEOPLE TO TRAVEL WITH

**Mr. S. B. Shetty – 9820510043**
101, Udyog Kshetra, L.B.S. Marg, Off Link Road, Mulund (W), Mumbai-80. | Tel.: 41115000 | Fax : 41115005

**Mr. T. T. Mada – 9820632934**
2, Srishti Complex, Opp. L & T Gate No.7, Saki Vihar Rd., Powai, Mumbai-72. **Tel. : (022) 42215000**
**Fax : 91-22-28571468 E-mail : info@canaratravels.com | Website : www.canaratravels.com**

**Mr. Prabhat Shetty - 9481950340**
204, Kirthi Sagar, Vidyaratnanagar Manipal - 576104

**Mr. Varun Mallya - 9480744833**
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06

**Mr. Suresh Ajila 09448089189** (Bangalore)

ADVT.

ಕಟೀಲುಶ್ರೀ ದುರ್ಗಾಪರಮೇಶ್ವರಿ
ಜ್ಯೋತಿಷ್ಯ ಪೀಠ

ಪ್ರಧಾನ ತಾಂತ್ರಿಕ ಶ್ರೀ ಶ್ರೀ ವಿಜಯೇಂದ್ರ ಭಟ್

ದೈವ ಪ್ರಶ್ನೆ ಅಷ್ಟಮಂಗಳ ಪ್ರಶ್ನೆ ಜಾತಕ ಹಸ್ತ ಫೋಟೋ ನೋಡಿ
ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ

ನಿಮ್ಮ ಸಮಸ್ಯೆ ಏನೇ ಇರಲಿ ಕೇರಳಿಯ ಯಂತ್ರ
ಮಂತ್ರ ತಾಂತ್ರಿಕ ವಿಧಿ ವಿಧಾನಗಳಿಂದ ಶ್ರೀ ಕಟೀಲು
ದುರ್ಗಾಪರಮೇಶ್ವರಿ ಅನುಗ್ರಹದಿಂದ. 5 ದಿನದಲ್ಲಿ ಶಾಶ್ವತ
ಪರಿಹಾರ ಶತಸಿದ್ಧ



ಶ್ರೀ ಕಟೀಲು ದುರ್ಗಾಪರಮೇಶ್ವರಿ ದೇವಿ ಆರಾಧಕರು

ದೂರದ ಊರಿನವರಿಗೆ ಫೋನ್
ಮೂಲಕ ಪರಿಹಾರ ತಿಳಿಸುತ್ತಾರೆ

99452 22228

ಮನೆಯಲ್ಲಿ ಅಶಾಂತಿ ಮಾನಸಿಕ ಕಿರಿಕಿರಿ ವಿದ್ಯಾಭ್ಯಾಸದಲ್ಲಿ ತೊಂದರೆ
ಮದುವೆ ಯೋಗ ಬೇಗನೆ ಕೂಡಿಬರಲು ಸ್ತ್ರೀ ಪುರುಷ ಪ್ರೇಮ
ಆಕರ್ಷಣ ಸಿದ್ದಿ ದೂರವಾಗಿರುವ ಪತಿ ಪತ್ನಿ ಒಂದಾಗಲು ಡೈವರ್ಸ್
ಸಮಸ್ಯೆ ಸಂತಾನ ಲೈಂಗಿಕ ದೋಷ ಹಣಕಾಸಿನ ಸಮಸ್ಯೆಯಿಂದ
ಮುಕ್ತಿ ಪಡೆಯಲು ಶತ್ರುಗಳು ಮೆತ್ತಗಾಗಿ ಮೂಲೆ ಸೇರಲು ಉದ್ಯೋಗ
ವ್ಯಾಪಾರದಲ್ಲಿ ಪ್ರಗತಿ ಹೊಂದಲು ಮಾಟ ಮಂತ್ರ ವಶೀಕರಣ ನಿವಾರಣೆ
ಅತ್ತೆ ಸೊಸೆ ಕಲಹ ಅದೃಷ್ಟ ಪ್ರಾಪ್ತಿ ಸಮಸ್ಯೆ ಯಾವುದೇ ಇರಲಿ
ಪರಿಹಾರ ಶತಸಿದ್ಧ

ಸ್ಥಳ:-ಕೆ ಎಸ್ ರಾವ್ ರೋಡ್, ಮಂಗಳೂರು ಹಾಗು
ಡಿವಿಜಿ ರೋಡ್ ಬೆಂಗಳೂರು

ADVT.

Shree Durgaparameshwari Educational Trust (Regd.)

College Code: AS1005

# J S Pre-University College

(Recgd. by Govt. of Karnataka)

# J S Degree College

(Affiliated to Bangalore University)

# 198, Balagangadhar Nagar, Kengunte, Near Dr. Ambedkar Engg.College Signal, Mallathahalli, Bengaluru - 560 056. Ph: 080-23218381 ; M: 8884666558
E-mail: info@jspuc.com | Website: www.jspuc.com




"We ensure academic excellence and discipline"

*"An institution with the determination and commitment to materialize the desired objectives through brilliant academic brains".*

## COURSES OFFERED

**PUC - SCIENCE:** P C M B, P C M Cs., P C M E
**PUC - COMMERCE:** B A S Cs., E B A Cs., E B A S
**Languages:** English, Kannada, Hindi, Sanskrit

**Facilities:**
CET / NEET / JEE / KVPY / NATA / CA - Foundation, IAS Integrated

**Degree Courses:** B.Com, BBA, BCA




**Enrol Now**
E-mail: info@jspuc.com | Website: www.jspuc.com

## Our First Batch of II PUC Annual Exam Results: 2022 State Rank Holders



**Madhushree S. Shetty**
PCMB: Total - 589 (98.16%)
Phy: 100 ; Maths: 100 ; Chem: 99
Bio: 99 ; Kan: 99 ; Eng: 92
**State 8th Rank**



**Moulya R. Gowda**
PCMB: Total - 587 - (97.8%)
Phy: 100 ; Maths: 100 ; Chem: 100
Bio: 100 ; Kan: 94 ; Eng: 93
**State 10th Rank**



**Pooja J. Yadav**
BASC: Total - 580 - (96.66%)
B: 99 ; S: 98 ; A: 97 ; E: 96
H: 96 ; C: 94
**State 15th Rank**



**Sujal Kumar R.**
PCMB: Total - 576 - (96%)
Phy: 95 ; Maths: 100 ; Chem: 94
Bio: 96 ; Hin: 99 ; Eng: 92
**State 20th Rank**



**Prof. Dr. Jayarama Shetty S.**
M.A., M.Ed., M.Sc., M.B.A., Ph.D., P.G.D.P.M.I.R., F.M.S.P.I., D.B.M.
Founder / Director

An epitome in the field of education. A renowned educationist, philanthropist and psychologist who has been a catalyst in many success stories. Dr. Shetty has been mentoring, guiding, counselling and nurturing students for over a period of four decades, both in Mangalore and Bangalore. He has been persistent in seeking remarkable results with ranks and distinction by adopting innovative pedagogy.

**For more information on Admission Contact:**
**Ph: 080-23218381**
**M: 8884666558**

ADVT.

# ಶ್ರದ್ಧಾಂಜಲಿ



**ಪ್ರೊ. ಸಂಜೀವ ಶೆಟ್ಟಿ**
**ಸದಸ್ಯತ್ವ ಸಂಖ್ಯೆ: CL0002792**

ಪ್ರೊ. ಸಂಜೀವ ಶೆಟ್ಟಿಯವರು ದಿನಾಂಕ 20.02.2023ರಂದು ತಮ್ಮ 88ನೇ ವಯಸ್ಸಿನಲ್ಲಿ ನಿಧನರಾದರು. ಗೋವಾ ಡೆಂಪೆ ಕಾಲೇಜಿನ ನಿವೃತ್ತ ಅಧ್ಯಾಪಕರಾದ ಇವರು ತಮ್ಮ ಪತ್ನಿ ಕೆಂಚನೂರು ಶ್ರೀಮತಿ ಸರೋಜಿನಿ ಎಸ್. ಶೆಟ್ಟಿ, ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀಮತಿ ಮದಾಲಸ ಬಿ. ಶೆಟ್ಟಿ**
**ಸದಸ್ಯತ್ವ ಸಂಖ್ಯೆ: CL0000413**

ಕಟಪಾಡಿ ಅಂಬಾಡಿಬೀಡು ಶ್ರೀಮತಿ ಮದಾಲಸ ಬಿ. ಶೆಟ್ಟಿಯವರು ದಿನಾಂಕ 17.03.2023ರಂದು ತಮ್ಮ 76ನೇ ವಯಸ್ಸಿನಲ್ಲಿ ನಿಧನರಾದರು. ಇವರು ಮೂವರು ಪುತ್ರರು, ಓರ್ವ ಮೊಮ್ಮಗಳು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಜಯಂತ್ ಶೆಟ್ಟಿ ಎಸ್.**
**ಸದಸ್ಯತ್ವ ಸಂಖ್ಯೆ: CL004776**

ಕೆದೂರು ಅರೆಕಲ್ಲುಮನೆ ಶ್ರೀ ಎಸ್. ಜಯಂತ್ ಶೆಟ್ಟಿಯವರು ದಿನಾಂಕ 15.03.2023ರಂದು ತಮ್ಮ 61ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ತಂದೆ, ಪತ್ನಿ ಅಚ್ಲಾಡಿ ಅಡಾರ್‌ಮನೆ ಶ್ರೀಮತಿ ಸವಿತಾ ಜೆ. ಶೆಟ್ಟಿ, ಇಬ್ಬರು ಪುತ್ರಿಯರು, ಓರ್ವ ಮೊಮ್ಮಗ, ಓರ್ವ ಸಹೋದರ, ಇಬ್ಬರು ಸಹೋದರಿಯರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ವಿಠಲ್ ಶೆಟ್ಟಿ ಜಿ.**
**ಸದಸ್ಯತ್ವ ಸಂಖ್ಯೆ: CL010324**

ಕೋಟ ಗಿಳಿಯಾರು ಬಡಾಮನೆ ಶ್ರೀ ಜಿ. ವಿಠಲ್ ಶೆಟ್ಟಿಯವರು ದಿನಾಂಕ 28.02.2023ರಂದು ತಮ್ಮ 72ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಕೆದೂರು ಅರೆಕಲ್ಲುಮನೆ ಶ್ರೀಮತಿ ಆಶಾಲತಾ ವಿ. ಶೆಟ್ಟಿ, ಮೂವರು ಪುತ್ರಿಯರು, ಐದು ಜನ ಮೊಮ್ಮಕ್ಕಳು, ಮೂವರು ಸಹೋದರರು, ಮೂವರು ಸಹೋದರಿಯರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಬಿ. ಸುರೇಂದ್ರ ಹೆಗ್ಡೆ**
**ಸದಸ್ಯತ್ವ ಸಂಖ್ಯೆ: CL004445**

ವಿಜಯಾ ಬ್ಯಾಂಕ್‌ನ ನಿವೃತ್ತ ಸೀನಿಯರ್ ಮ್ಯಾನೇಜರ್ ಸಟ್ವಾಡಿ ಶ್ರೀ ಬಿ. ಸುರೇಂದ್ರ ಹೆಗ್ಡೆಯವರು ದಿನಾಂಕ 31.03.2023 ರಂದು ತಮ್ಮ 82ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಬ್ರಹ್ಮಾವರ ಹಂದಾಡಿ ಪಡುಮನೆ ಶ್ರೀಮತಿ ಬಿ. ಶೀಲಾ ಎಸ್. ಹೆಗ್ಡೆ, ಇಬ್ಬರು ಪುತ್ರಿಯರು, ನಾಲ್ವರು ಮೊಮ್ಮಕ್ಕಳು, ಓರ್ವ ಸಹೋದರ, ಓರ್ವ ಸಹೋದರಿ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ವಿಜಯ್ ಕುಮಾರ್ ಶೆಟ್ಟಿ**
**ಸದಸ್ಯತ್ವ ಸಂಖ್ಯೆ: CL011141**

ಹೆಬ್ರಿ ಶ್ರೀ ವಿಜಯ್ ಕುಮಾರ್ ಶೆಟ್ಟಿಯವರು ದಿನಾಂಕ 31.03.2023 ರಂದು ತಮ್ಮ 52ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಕುಂದಾಪುರ ಶ್ರೀಮತಿ ಸಂಜೀವಿನಿ ವಿ. ಶೆಟ್ಟಿ, ಓರ್ವ ಪುತ್ರಿ, ನಾಲ್ವರು ಸಹೋದರರು, ಓರ್ವ ಸಹೋದರಿ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಜಯಶೀಲ ಅಡಪ**
**ಸದಸ್ಯತ್ವ ಸಂಖ್ಯೆ: CL003728**

ಕಡ್ವಾಯಿ ಶ್ರೀ ಜಯಶೀಲ ಅಡಪರವರು ದಿನಾಂಕ 04.04.2023 ರಂದು ತಮ್ಮ 62ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಮೂಲ್ಕಿ ಕೊಳ್ನಾಡು ಪಾದೆಮನೆ ಶ್ರೀಮತಿ ನೀತಾ ಜೆ. ಅಡಪ, ಓರ್ವ ಪುತ್ರಿ, ಓರ್ವ ಪುತ್ರ, ಓರ್ವ ಸಹೋದರ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ADVT.


BUNTS' SANGHA RNS
EVENING COLLEGE
(Recognised by the Government of Karnataka, Affiliated to Bangalore University)
No. 324, Bunts' Sangha Complex, Chord Road,
Vijayanagar, Bengaluru - 560 040.
Contact : 080-23398922 / 8217365948
Website: www.bsrnsv.com, E-mail: principalrnsec@gmail.com
COURSES OFFERED
▪ B.COM
▪ B.COM INTEGRATED
[CA/ACS/ CMA]
BUNTS' SANGHA R.N.S. VIDYANIKETAN
RNS
VIDYANIKETAN
ADMISSIONS
OPEN 2023-24
* Pioneers in Educational Field.
* Limited seats - Individual attention.
* Value added soft skill training and job oriented courses.
* 100% Results is the goal.
* Qualified, dedicated and inspiring faculties.
* Best suited for CA, ACS and CMA aspirants.
* CCTV Camera Surveillance.
* Voluminous Library.
* Spacious Auditorium.
* Hostel facilities available for boys and girls.
* Industrial Visits

ADVT.

ಸ್ಥಾಪನೆ: 1997

ದೂರವಾಣಿ : 23393444
ಮೊಬೈಲ್ : 8722006082

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ
# Vijaya Pathina Souharda Sahakari Niyamitha

ನಂ 5, ಎಸ್.ಜಿ. ಎಲಿಗೆನ್ಸ್, 4ನೇ ಮಹಡಿ, ಚಂದ್ರ ಲೇಔಟ್ ಮುಖ್ಯ ರಸ್ತೆ, ಇನ್‌ಕಮ್‌ಟ್ಯಾಕ್ಸ್ ಲೇಔಟ್, ವಿಜಯನಗರ, ಬೆಂಗಳೂರು – 560 040.
**Email : vijaya_souharda@yahoo.in, vijayasouharda@rediffmail.com**

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದ್ದು, 25 ಸಂವತ್ಸರಗಳನ್ನು ಮುಗಿಸಿರುವುದು ಸಂತೋಷದಾಯಕ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿ ದರವನ್ನು ನೀಡಲಾಗುತ್ತಿದೆ. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.

**ಸಾಲಗಳು**

- ಜಾಮೀನು ಸಾಲ : ರೂ. 50,000.00
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿನಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ : 1 ಲಕ್ಷದಿಂದ 60 ಲಕ್ಷ – 120 ತಿಂಗಳು ಗರಿಷ್ಠ

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು 13%**

2016–17 ರಿಂದ ಸತತವಾಗಿ 15% ಹಾಗೂ 2021 –2022 ರಲ್ಲಿ 12% ಮತ್ತು 2022–2023 ರಲ್ಲಿ 13%
ವಾರ್ಷಿಕ ಡಿವಿಡೆಂಡ್ ವಿತರಣೆ

ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ

**ವ್ಯವಹಾರದ ವೇಳೆ :**

| ಸೋಮವಾರದಿಂದ | ಬೆಳಿಗ್ಗೆ | ಸಾಯಂಕಾಲ |
|---|---|---|
| ಶುಕ್ರವಾರದವರೆಗೆ | 9–30 ರಿಂದ 1–00 | 2–00 ರಿಂದ 6–00 |
| ಶನಿವಾರ | 9–30 ರಿಂದ 1–00 | ರಜಾ |
| ಭಾನುವಾರ | ವಾರದ ರಜಾ ದಿನ | |

**ನಿರ್ದೇಶಕರುಗಳು**

ಶ್ರೀ ಕೆ. ಭಗವಾನ್ ದಾಸ್ ರೈ
ಬಲಿ. ಟಿ. ಎನ್. ಶಿವಾನಂದ ಶೆಟ್ಟಿ
ಶ್ರೀ ಬಿ. ಸಂತೋಷ್ ಕುಮಾರ್ ಶೆಟ್ಟಿ
ಶ್ರೀ ಡಿ. ಚಂದ್ರಹಾಸ್ ರೈ
ಶ್ರೀ ಕೆ. ಪ್ರಮೋದ್ ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ

ಕಾರ್ಯದರ್ಶಿ – ಶ್ರೀ ಕೆ. ಆರ್. ಶೇಷಾದ್ರಿ

**ಸ್ಥಾಪಕ ಅಧ್ಯಕ್ಷರು : ದಿ. ಡಾ॥ ಐ. ವಿ. ಶೆಟ್ಟಿ**

**ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ**
**ಅಧ್ಯಕ್ಷರು**

**ಶ್ರೀ ಹೆಚ್. ಶ್ರೀಧರ್ ಹೆಗ್ಡೆ**
**ಉಪಾಧ್ಯಕ್ಷರು**

ADVT.

Unbeatable Location. Near Everywhere You Want to be...




# Kirthi Palmville

Shiribeedu, Udupi

• SWIMMING POOL • CLUBHOUSE • WALKING TRACK • INDOOR GYM • KIDS PLAY ZONE

Nothing beats the comfort of having a home with close proximity to everything. Shopping malls, health centres, Spiritual centres, Educational Institutes, Super speciality hospitals at Manipal, Travel comforts or even the beautiful beaches on the Arabian sea at Malpe. Almost everything you wish to have is within your reach. Do you need any more reason?

Make Kirthi Palmville your home. Truly a new generation home for young and old.

Kirthi Palmville - the feel good factor for coming Home.

**RERA NO**: PRM/KA/RERA/1273/318/PR/210422/004842




**2 & 3 BHK Homes Starting at 65 Lakhs ***

For Booking Call +91 99452 71353 | +91 81971 40844

Project Promoted by

Kirthi CONSTRUCTION

www.kirthiconstruction.com

Architect: Ace Technocrats Pvt. Ltd. Udupi

Scan QR Code

3rd Floor, Maithri Complex, Udupi - 576101 | +91 820 2530655 | enquiry@kirthiconstruction.com

REGISTERED KA/BGW-1589/2021-2023 RNI NO : KARBIL/2005/16402, Date of Publication 07-04-2023.
Licenced post without prepayment License No. PMG BG /WPP-219/2021-2023, Total No. of Pages 32+4=36
Licensed to post at Bengaluru PSO, Mysore Road, Bengaluru - 560026, on 10th or 12th of every Month




Printed and Published by : Sri Anandram Shetty B. on behalf of Bunts' Sangha Bangalore.
# 324, Bunts' Sangha Complex, Chord Road, Vijayanagar, Bengaluru - 560040. Editor : Aravind Shetty M.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere, Bengaluru - 560 058. Phone : 080 - 23359588 | 23351210.